RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೋಳಿಯವರ ಕ್ರಾಸ್.
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೇಂಟ್ಸ್ ಸ್ಪೇಷಲಿಸ್ಟ್ ಟೇಲರ್
ಗಜೇಂದ್ರಗಡ–582114.
ಸೆಲ್ : 9986982482, 9686165708

ಇ–ಕೆವೈಸಿ ಪ್ರಕ್ರಿಯೆಗಾಗಿ ಆಧಾರ್ ಬಯೋಮೆಟ್ರಿಕ್ » 2

ರೋಣ ಬಿಜೆಪಿ ಮಂಡಲದಿಂದ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮದಿನಾಚರಣೆ » 3

ಹಬ್ಬದ ಸಡಗರದಲ್ಲಿ ಮರೆಯಾಗುವ ಖಾಕಿಯ ಮೌನದ ಕಣ್ಣೀರು » 4

ಸಂಪುಟ(Volume): 1 ಸಂಚಿಕೆ (Issue): 76 ● ಪುಟ (Page): 4 ● ದರ: Rs. 4 ಶನಿವಾರ 26 ಸೆಪ್ಟೆಂಬರ್ 2026 ● 26 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

## ಲಕ್ಷ್ಮೇಶ್ವರದ ಇರ್ಫಾನ್ ತಹಶೀಲ್ದಾರ್ ಹತ್ಯೆ ಪ್ರಕರಣ; ಮೂವರ ಬಂಧನ

**ಸತ್ಯಮಿಥ್ಯ ಸುದ್ದಿಮೂಲ ಗದಗ:** ಜಿಲ್ಲೆಯ ಲಕ್ಷ್ಮೇಶ್ವರ ಪಟ್ಟಣದಲ್ಲಿ ಬುಧವಾರ ನಡೆದಿದ್ದ ಇರ್ಫಾನ್ ತಹಶೀಲ್ದಾರ್ ಹತ್ಯೆ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಗುರುವಾರ ಬಂಧಿಸಲಾಗಿದೆ.



'ಲಕ್ಷ್ಮೇಶ್ವರದ ಆಯಾಸ್ ಮುಲ್ಲಾ, ಮೊಹಮ್ಮದ್ ಸೂಫಿ, ಮೊಹಮ್ಮದ್ ವಸೀಂ ಬಂಧಿತ ಆರೋಪಿಗಳು. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.

ಒಟ್ಟು ಎಂಟು ಮಂದಿ ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿ ಇದ್ದು, ಉಳಿದವರನ್ನು ಶೀಘ್ರದಲ್ಲೇ ಬಂಧಿಸಲಾಗುತ್ತದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಎಚ್.ಎನ್. ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಹಳೇ ವೈಷಮ್ಯ, ವೈಯಕ್ತಿಕ ದ್ವೇಷದಿಂದ ಹತ್ಯೆ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ವಸೀಂಗೆ ಇರ್ಫಾನ್ ₹30 ಸಾವಿರ ನೀಡಿದ್ದನು. ಬಡ್ಡಿ ನೀಡುವ ವಿಚಾರದಲ್ಲಿ ಗಲಾಟೆ ನಡೆದಿತ್ತು. ಹಣ ಕೊಡುವುದಾಗಿ ಲಕ್ಷ್ಮೇಶ್ವರ ಪಟ್ಟಣದ ಹೊರವಲಯದ ಬಡಾವಣೆಗೆ ಕರೆಸಿದ ಆರೋಪಿಗಳು, ಇರ್ಫಾನ್ ಮೇಲೆ ಚಾಕು ಹಾಗೂ ಚಿಕ್ಕ ಕೊಡಲಿಯಂತಹ ಆಯುಧದಿಂದ ಮುಖ ಹಾಗೂ ಕುತ್ತಿಗೆ ಮೇಲೆ ಹಲ್ಲೆ ಮಾಡಿರುವುದು ತಿಳಿದುಬಂದಿದೆ' ಎಂದರು.

ಮೃತ ಇರ್ಫಾನ್ ವಿರುದ್ಧ ಕೊಲೆಯತ್ನ, ದೌರ್ಜನ್ಯ, ಗೂಂಡಾಗಿರಿ ಸೇರಿದಂತೆ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಏಳು ಪ್ರಕರಣಗಳು ದಾಖಲಾಗಿದ್ದವು. 2017ರಲ್ಲಿ ಲಕ್ಷ್ಮೇಶ್ವರ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದ ಪ್ರಕರಣವೂ ದಾಖಲಾಗಿತ್ತು. ರೌಡಿಶೀಟರ್ ಆಗಿದ್ದ ಇವನನ್ನು ಗಡಿಪಾರು ಸಹ ಮಾಡಲಾಗಿತ್ತು' ಎಂದು ಮಾಹಿತಿ ನೀಡಿದರು. 'ಆರೋಪಿ ವಸೀಂ ವಿರುದ್ಧವೂ ಕೆಲವು ಪ್ರಕರಣ ದಾಖಲಾಗಿದೆ. ಆಡೂರ್ ಕುಟುಂಬದವರ ವಿರುದ್ಧ ಇರ್ಫಾನ್ ಸಹೋದರ ಆರೋಪ ಮಾಡಿದ್ದಾರೆ. ಎರಡೂ ಕುಟುಂಬಗಳ ನಡುವೆ ಕಲಹವಿತ್ತು. ಈ ಸಂಬಂಧ ಪ್ರಕರಣವೂ ದಾಖಲಾಗಿತ್ತು. ಗುಂಪು ದ್ವೇಷದ ಆಯಾಮದಲ್ಲೂ ತನಿಖೆ ನಡೆಸಲಾಗುತ್ತದೆ' ಎಂದು ಹೇಳಿದರು.

## ದೊಡ್ಡ ಖಾಸಗಿ ಆಸ್ಪತ್ರೆಗಳಿಗೂ ನಕಲಿ ಔಷಧಿ ಸರಬರಾಜು: ಸಚಿವ ಯು.ಟಿ. ಖಾದರ್ ಕಳವಳ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ಬೆಂಗಳೂರು:** ರಾಜ್ಯದಲ್ಲಿ ದಿನದಿಂದ ದಿನಕ್ಕೆ ನಕಲಿ ಔಷಧಿ ಜಾಲದ ಬೆಚ್ಚಿಬೀಳಿಸುವ ಸತ್ಯಗಳು ಹೊರಬರುತ್ತಿದ್ದು, ಈಗ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು ಹಾಗೂ ಮೆಡಿಕಲ್ ಸ್ಟೋರ್‌ಗಳು ಸಹ ಈ ಜಾಲದಲ್ಲಿ ಸಿಲುಕಿರುವುದು ಬಯಲಾಗಿದೆ. ಸ್ವತಃ ಆರೋಗ್ಯ ಸಚಿವ ಯು.ಟಿ. ಖಾದರ್ ಈ ಆತಂಕಕಾರಿ ವಿಚಾರವನ್ನು ಬಹಿರಂಗಪಡಿಸಿದ್ದು, ಸಾರ್ವಜನಿಕರಲ್ಲಿ ಭಾರೀ ಆತಂಕ ಮೂಡಿಸಿದೆ.



ನಕಲಿ ಔಷಧಿ ಜಾಲದ ಮೂಲವನ್ನು ಹುಡುಕಲು ಸರ್ಕಾರ ಎಸ್‌ಐಟಿ ತನಿಖೆಗೆ ಆದೇಶಿಸಿದ್ದು, ತನಿಖೆ ಆಳಕ್ಕೆ ಹೋದಂತೆಲ್ಲ ಹೊಸ ವಿಚಾರಗಳು ಬೆಳಕಿಗೆ ಬರುತ್ತಿವೆ. ಈಗಾಗಲೇ ಈ ಜಾಲದಲ್ಲಿ ಭಾಗಿಯಾಗಿದ್ದ 24 ಪ್ರಮುಖ ಔಷಧ ಸಂಸ್ಥೆಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗಿದೆ. ಆದರೆ ಇದು ಕೇವಲ ಸ್ಯಾಂಪಲ್ ಅಷ್ಟೇ; ಬೃಹತ್ ಖಾಸಗಿ ಆಸ್ಪತ್ರೆಗಳಿಗೂ ಈ ಔಷಧಿಗಳು ಸರಬರಾಜಾಗಿರುವುದು ಖಚಿತವಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

**ಫೈಜರ್ ಕಂಪನಿಗೆ ಮತ್ತಷ್ಟು ಸಂಕಷ್ಟ:** ಇದೇ ವೇಳೆ, ಜಾಗತಿಕ ಔಷಧ ದೈತ್ಯ 'ಫೈಜರ್' (ಕಜಿದಜಡಿ) ಕಂಪನಿಯ ವಿರುದ್ಧವೂ ಸರ್ಕಾರ ಕಠಿಣ ಕ್ರಮಕ್ಕೆ ಮುಂದಾಗಿದೆ. ಈ ಹಿಂದೆ ಫೈಜರ್ ಕಂಪನಿಯ ಕೆಲ ಔಷಧಿಗಳು ನಕಲಿ ಎಂದು ತಿಳಿದುಬಂದಾಗ ಕಂಪನಿಯ ಲೈಸೆನ್ಸ್ ಅನ್ನು ಅಮಾನತುಗೊಳಿಸಲಾಗಿತ್ತು. ಆದಾಗ್ಯೂ, ತನಿಖೆ ಮತ್ತು ವಿಚಾರಣೆ ವೇಳೆ ಫೈಜರ್ ಕಂಪನಿಯು ಸರ್ಕಾರಕ್ಕೆ ಸರಿಯಾದ ಸಹಕಾರ ನೀಡದ ಹಿನ್ನೆಲೆಯಲ್ಲಿ, ಈಗ ಸರ್ಕಾರ ಮತ್ತೆ ಖಡಕ್ ನಿರ್ಧಾರ ಕೈಗೊಳ್ಳಲು ಸಜ್ಜಾಗಿದೆ.

**ನಕಲಿ ಔಷಧಿಗಳ ಸ್ಟಾಕ್ ವಾಪಸ್:** ಖಾಸಗಿ ಆಸ್ಪತ್ರೆಗಳು ಹಾಗೂ ಮೆಡಿಕಲ್ ಸ್ಟೋರ್‌ಗಳಿಗೆ ಯಾವೆಲ್ಲಾ ನಕಲಿ ಔಷಧಿಗಳು ಸರಬರಾಜಾಗಿವೆಯೋ, ಆ ಎಲ್ಲಾ ಸ್ಟಾಕ್‌ಗಳನ್ನು ತಕ್ಷಣವೇ ಹಿಂಪಡೆಯಲು (ಘಾಣುಜಡಿಚಿತಿ) ಕ್ರಮ ಕೈಗೊಳ್ಳಲಾಗುತ್ತಿದೆ. ನಕಲಿ ಔಷಧಿ ಜಾಲದಲ್ಲಿ ಭಾಗಿಯಾಗಿರುವ ಪ್ರಭಾವಿ ಆಸ್ಪತ್ರೆಗಳ ಪಟ್ಟಿಯನ್ನು ಸದ್ಯದಲ್ಲೇ ಸರ್ಕಾರ ಅಧಿಕೃತವಾಗಿ ಬಿಡುಗಡೆ ಮಾಡಲಿದೆ ಎಂದು ಹೆಚ್‌ಎಮ್‌ಡಿ ತಿಳಿಸಿದೆ.

**ಖಾಸಗಿ ಮೆಡಿಕಲ್ ಸ್ಟೋರ್‌ಗಳ ಮೇಲೆಯೂ ಕಣ್ಣು:** ಇದರ ಜೊತೆಗೆ, ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಕಾರ್ಯಾಚರಿಸುತ್ತಿರುವ ಖಾಸಗಿ ಮೆಡಿಕಲ್ ಸ್ಟೋರ್‌ಗಳ ಮೇಲೆಯೂ ಕಣ್ಣಿಡಲಾಗಿದ್ದು, ಶೀಘ್ರದಲ್ಲೇ ಅವುಗಳ ತಪಾಸಣೆ ಮತ್ತು ಶೋಧ ಕಾರ್ಯವನ್ನು ತೀವ್ರಗೊಳಿಸಲು ಆರೋಗ್ಯ ಇಲಾಖೆ ನಿರ್ಧರಿಸಿದೆ.

## ಚುನಾವಣಾ ಆಯೋಗಕ್ಕೆ ಪ್ರಶ್ನೆ ಕೇಳಿದ್ರೆ ಬಿಜೆಪಿ ನಾಯಕರು ಏಕೆ ಉತ್ತರಿಸುತ್ತಾರೆ?

**ಬೆಂಗಳೂರು:** ಚುನಾವಣಾ ಆಯೋಗಕ್ಕೆ ಪ್ರಶ್ನೆ ಕೇಳಿದ್ರೆ ಬಿಜೆಪಿ ನಾಯಕರು ಏಕೆ ಉತ್ತರಿಸುತ್ತಾರೆ? ಕೆಪಿಸಿಸಿ ಅಧ್ಯಕ್ಷ ಬಿಕೆ ಹರಿಪ್ರಸಾದ್ ವಾಗ್ದಾಳಿ ನಡೆಸಿದ್ದಾರೆ. ಈ ಕುರಿತಾಗಿ ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕೇಂದ್ರ ಚುನಾವಣಾಆಯೋಗದ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿದರು.



ನಾವು ಚುನಾವಣಾ ಆಯೋಗದ ಬಗ್ಗೆ ಮಾತನಾಡಿದರೆ, ಅವರ ಪರವಾಗಿ ಸಮರ್ಥನೆಗೆ ನಿಲ್ಲುವುದು ಕೇಂದ್ರ ಬಿಜೆಪಿ ನಾಯಕರು. ನಾವು ಚುನಾವಣಾ ಆಯೋಗಕ್ಕೆ ಪ್ರಶ್ನೆ ಮಾಡಿದರೆ ಆಯೋಗದವರೇ ಉತ್ತರ ನೀಡಬೇಕು. ಆದರೆ ಬಿಜೆಪಿಯವರು ಉತ್ತರ ನೀಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕೇಂದ್ರ ಚುನಾವಣಾಆಯೋಗದ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರು ಕಳೆದ 10 ತಿಂಗಳಲ್ಲಿ 14 ಬಾರಿ ಇನ್ನುಳಿದ ಇಬ್ಬರು ಆಯುಕ್ತರ ಭಿನ್ನಮತವನ್ನು ತಳ್ಳಿಹಾಕಿ ಗೌಪ್ಯವಾಗಿ ಎಸ್‌ಐಆರ್‌ಪ್ರಕ್ರಿಯೆನಡೆಸಿರುವುದುದೇಶದನಾಗರೀಕರಿಗೆಅಘಾತತಂದಿದೆ. ಪ್ರಜಾಪ್ರಭುತ್ವದ ಅಸ್ಥಿತ ಉಳಿಸುವುದು ಆಯೋಗದ ಮೇಲಿರುತ್ತದೆ. ಆದರೆ ಒಂದು ರಾಜಕೀಯ ಪಕ್ಷಕ್ಕೆ ಹಾಗೂ ಒಬ್ಬ ನಾಯಕನಿಗಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡಲಾಗಿದೆ.

ಜ್ಞಾನೇಶ್ ಕುಮಾರ್ ಮಾಡಿರುವ ಕೆಲಸ ಬಿಹಾರದಲ್ಲಿ 63 ಲಕ್ಷ ಪಶ್ಚಿಮ ಬಂಗಾಳದಲ್ಲಿ 91 ಲಕ್ಷ ಈಗ ಕರ್ನಾಟಕದಲ್ಲಿ 1.07 ಕೋಟಿ ಮತಗಳನ್ನು ಕಿತ್ತುಹಾಕಲಾಗಿದೆ. ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗಕ್ಕೆ 2025ರಫೆಬ್ರವರಿಯಲ್ಲಿಬರೆದಪತ್ರದಲ್ಲಿಸ್ಪಷ್ಟವಾಗಿತಿಳಿಸಿದ್ದರೂಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಗೌರವವಿಲ್ಲದೇ ಆಯೋಗವು ತೆಗೆದುಕೊಂಡಿರುವ ಏಕಪಕ್ಷೀಯ ನಿರ್ಧಾರಗಳನ್ನು ನಾವು ಖಂಡಿಸುತ್ತೇವೆ. ಮಾಧ್ಯಮಗಳಲ್ಲಿ ಎರಡು ದಿನಗಳಿಂದ ಬಂದಿರುವ ವರದಿಗಳ ಪ್ರಕಾರ, ಪ್ರಜಾಪ್ರಭುತ್ವ ಹಾಗೂ ಸಂವಿಧಾನ ವಿರುದ್ಧ ನಡೆ ಸ್ಪಷ್ಟವಾಗಿ ಕಾಣುತ್ತದೆ.

ಇದು ದೇಶದ್ರೋಹ ಕೆಲಸವಾಗಿದ್ದು, ಇದಕ್ಕೆ ಕುಮ್ಮಕ್ಕು ನೀಡಿರುವ ಪ್ರಧಾನಮಂತ್ರಿಗಳು, ಗೃಹಸಚಿವರು, ಚುನಾವಣಾ ಆಯೋಗದ ಕಾರ್ಯ ದೇಶದ್ರೋಹವೆಂದೇಪರಿಗಣಿಸಬೇಕಾಗುತ್ತದೆ.ಜ್ಞಾನೇಶ್‌ಕುಮಾರ್‌ಅವರಿಗೆ ಈಗಾಗಲೇ 2023ರಲ್ಲಿ ಸಂಸತತ್ತಿನಲ್ಲಿ ತೆಗೆದುಕೊಂಡಿರುವ ತೀರ್ಮಾನ ಪ್ರಕಾರ, ಚುನಾವಣಾ ಆಯುಕ್ತರ ಮೇಲೆ ಯಾವುದೇ ಪ್ರಕರಣದಲ್ಲಿ ನಾವು ಕೇಸ್ ದಾಖಲಿಸಿ, ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಜ್ಞಾನೇಶ್ ಕುಮಾರ್ ಅವರಿಂದತಕ್ಷಣವೇಕೇಂದ್ರಚುನಾವಣಾ ಆಯೋಗದಿಂದ ರಾಜೀನಾಮೆ ಪಡೆದು ಬಂಧಿಸಬೇಕು. ಇಷ್ಟು ಬಹಿರಂಗವಾಗಿ ಸಂವಿಧಾನ ವಿರುದ್ಧ ಮಾಡಿರುವ ಕೆಲಸವನ್ನು ಖಂಡಿಸಿ ನಾವು ನಾಳೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದು, ಬೇರೆ ಪಕ್ಷದವರಿಗೂ ನಾವು ಆಹ್ವಾನ ನೀಡಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ನಂಬಿಕೆ ಇಟ್ಟಿರುವ ಯಾವುದೇ ಪಕ್ಷವಾದರೂ ಈ ಪ್ರತಿಭಟನೆಯಲ್ಲಿ ಭಾಗವಹಿಸಬಹುದು. ಈ ರೀತಿ ಆದರೆ ಮುಂದಿನ ದಿನಗಳಲ್ಲಿ ಚುನಾವಣೆ ಎಂಬುದು ಜಾತಕಪಕ್ಷಿಯಾಗಲಿದೆ.

ಎರಡನೇ ಹಂತದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಪಡೆದು ಬಂಧಿಸಲು ಆಗ್ರಹಿಸಿ ಪ್ರತಿಭಟನೆ ನಡೆಸಲಾಗುವುದು. ಸೆ.23ರಂದು ಪತ್ರಿಕೆಯಲ್ಲಿ ಬಂದ ವರದಿಯಲ್ಲಿ ರಾಹುಲ್ ಗಾಂಧಿ ಅವರು ಈ ಹಿಂದೆ ಹೇಳಿದ್ದ ಅಂಶ ಸ್ಪಷ್ಟವಾಗಿ ಕಾಣುತ್ತಿದೆ. ಸಿಖ್ಬೀರ್ ಸಿಂಗ್ ಹಾಗೂ ವಿವೇಕ್ ಜೋಷಿ ಅವರು 10 ತಿಂಗಳಲ್ಲಿ 14 ಬಾರಿ ಭಿನ್ನಮತ ವ್ಯಕ್ತಪಡಿಸಿದ್ದರೂ ಏಕಪಕ್ಷೀಯವಾಗಿ ಕೈಗೊಳ್ಳಲಾಗಿದೆ. ಜ್ಞಾನೇಶ್ ಕುಮಾರ್ ಅವರು ಇನ್ನಿಬ್ಬರು ಆಯುಕ್ತರ ಅನುಮತಿ ಇಲ್ಲದೇ ತೀರ್ಮಾನ ತೆಗೆದುಕೊಳ್ಳಲಾಗಿದೆ. ಇಬ್ಬರು ಆಯುಕ್ತರ ವಿರೋಧದ ನಡುವೆಯೂ ಫಾರಂ 6 ಅನ್ನು ಮಾರ್ಪಾಡು ಮಾಡಲಾಗಿದೆ.

ರಾಹುಲ್ ಗಾಂಧಿ ಅವರು ಮತಗಳ್ಳತನ ವಿರುದ್ಧ ಧ್ವನಿ ಎತ್ತಿದಾಗ ಜ್ಞಾನೇಶ್ ಕುಮಾರ್ ಅವರು ರಾಹುಲ್ ಗಾಂಧಿ ದೇಶದ ಜನರ ಮುಂದೆ ಕ್ಷಮೆ ಕೋರಬೇಕು ಎಂದು ತಿಳಿಸಿದ್ದರು. ಈಗ ನಡೆದಿರುವ ಅಸಂವಿಧಾನಿಕ ತೀರ್ಮಾನಕ್ಕಾಗಿ ಜ್ಞಾನೇಶ್ ಕುಮಾರ್ ಅವರು ಕ್ಷಮೆಗೆ ಅರ್ಹರಲ್ಲ ಎಂದರು.

## ಸ್ಟಾಲಿನ್ ಸರ್ ಮಾತಾಡಿ!

**ಚೆನ್ನೈ:** ಉದ್ಯಮಿ ವೀರಮಣಿ ಸೆಕ್ಸ್ ಹಗರಣವನ್ನು ಉಲ್ಲೇಖಿಸಿ ಡಿಎಂಕೆ ಮುಖ್ಯಸ್ಥ ಮತ್ತು ಮಾಜಿ ಮುಖ್ಯಮಂತ್ರಿ ಎಂಕೆ ಸ್ಟಾಲಿನ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರು, "ಸ್ಟಾಲಿನ್ ಸರ್, ಮಾತನಾಡಿ" ಎಂದು ಆಗ್ರಹಿಸಿದ್ದಾರೆ.



ಹಲವು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯದಂತಹ ಭಯಾನಕ ಪ್ರಕರಣದಲ್ಲೂ ಎಐಎಡಿಎಂಕೆ ಜೊತೆ, ಸ್ಟಾಲಿನ್ ಶಾಮೀಲಾಗಿದ್ದಾರೆ ಎಂದು ವಿಜಯ್ ಗಂಭೀರ ಆರೋಪ ಮಾಡಿದ್ದಾರೆ. ಹಲವು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಚೆನ್ನೈ ಮೂಲದ ಗ್ರಾನೈಟ್ಸ್ ಉದ್ಯಮಿ ಹಾಗೂ ಜೆಮ್ ಗ್ರೂಪ್‌ನ ಅಧ್ಯಕ್ಷ ಆರ್. ವೀರಮಣಿಯನ್ನು ಪೋಕ್ಸೊ(POCSO) ಪ್ರಕರಣದಲ್ಲಿ ಬಂಧಿಸಲಾಗಿದೆ. ವೀರಮಣಿ ಸೆಕ್ಸ್ ಹಗರಣದ ಬಗ್ಗೆ ಹಿಂದಿನ ಡಿಎಂಕೆ ಆಡಳಿತದಲ್ಲಿ ದೂರು ದಾಖಲಾಗಿದ್ದರೂ, ಇಡೀ ಅಪರಾಧ ಮತ್ತು ಅದರ ಇತಿಹಾಸವನ್ನು ಹೂತುಹಾಕಲಾಯಿತು ಎಂದು ವಿಜಯ್ ಆರೋಪಿಸಿದ್ದಾರೆ. "ಅಸಲಿಗೆ ಆ ಪ್ರಕರಣವೇನು ಎಂದು ತಮಿಳುನಾಡು ಪ್ರಶ್ನಿಸುತ್ತಿದೆ. ಸ್ಟಾಲಿನ್ ಅವರೇ, ಬಾಯಿ ಬಿಡಿ, ದನಿ ಎತ್ತಿ; ನಿಮ್ಮೊಂದಿಗೆ ಕೈಜೋಡಿಸಿರುವ ಎಐಎಡಿಎಂಕೆ(AIADMK) ಕೂಡ ಈ ಬಗ್ಗೆ ತುಟಿಬಿಚ್ಚುತ್ತಿಲ್ಲ. ಈ ವಿಷಯದಲ್ಲೂ ಒಳಒಪ್ಪಂದವಿದೆಯೇ? ಈ ವಿಚಾರದಲ್ಲೂ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ನೀವು ಮೌನವಾಗಿಯೇ ಉಳಿಯುತ್ತೀರಾ?" ಎಂದು ವಿಜಯ್ ಪ್ರಶ್ನಿಸಿದ್ದಾರೆ.

ಎಐಎಡಿಎಂಕೆಯ ಕೆ.ಮರಗಥಂ ಕುಮಾರವೇಲ್ ಅವರ ರಾಜೀನಾಮೆಯಿಂದಾಗಿ ತೆರವಾದ ಸ್ಥಾನಕ್ಕೆ ಅಕ್ಟೋಬರ್ 6ರಂದು ನಡೆಯುವ ಉಪಚುನಾವಣೆಯ ಪ್ರಚಾರ ಸಭೆಯಲ್ಲಿ ಸಿಎಂ ವಿಜಯ್, ಮಾಜಿ ಸಿಎಂ ವಿರುದ್ಧ ವಾಗ್ದಾಳಿ ನಡೆಸಿದರು. ವೀರಮಣಿ 2003 ಅಥವಾ ಅದಕ್ಕೂ ಮುಂಚೆಯೇ ಇನ್ನೂ ಅನೇಕ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಕೇಂದ್ರ ಅಪರಾಧ ವಿಭಾಗ(CCB)ದ ತನಿಖೆಯಿಂದ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಸೆ. 29ರಂದು ಆನೆಗೊಂದಿಯಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ

ಕೊಪ್ಪಳ : ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ಕೊಪ್ಪಳ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನುಗಂಗಾವತಿತಾಲೂಕಿನಆನೆಗೊಂದಿಯಲ್ಲಿಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ. ಇಟ್ನಾಳ ಅವರು ತಿಳಿಸಿದ್ದಾರೆ.

ಪ್ರವಾಸೋದ್ಯಮದಲ್ಲಿ ಡಿಜಿಟಲ್ ನಾವೀನ್ಯತೆ, ಕೃತಕ ಬುದ್ಧಿಮತ್ತೆ (ಎಐ) ಬಳಕೆ ಮತ್ತು ಸುಸ್ಥಿರ ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ವಿಶ್ವ ಪ್ರವಾಸೋದ್ಯಮ ದಿನಾಚರಣೆಯನ್ನು ವಿಜಯನಗರ ಸಾಮ್ರಾಜ್ಯದ ಮೊದಲ ರಾಜಧಾನಿ ಮತ್ತು ಈ ಭಾಗದ ಐತಿಹಾಸಿಕ ಸುಪ್ರಸಿದ್ಧ ಪ್ರವಾಸಿ ತಾಣವಾದ ಆನೆಗೊಂದಿಯಲ್ಲಿ ಆಯೋಜಿಸಲಾಗುತ್ತಿದೆ. ವಿಶೇಷ ಸೈಕ್ಲಿಂಗ್ ಜಾಥ: ವಿಶ್ವ ಪ್ರವಾಸೋದ್ಯಮ ದಿನಾಚರಣೆಯ ನಿಮಿತ್ತ ಐತಿಹಾಸಿಕ ತಾಣಗಳಾದ ಅಂಜನಾದ್ರಿ ಬೆಟ್ಟದಿಂದ ಆನೆಗುಂದಿಯ ಗಗನ್ ಮಹಲ್‌ವರೆಗೆ ವಿಶೇಷ ಸೈಕ್ಲಿಂಗ್ ಜಾಥಾವನ್ನು ಹಮ್ಮಿಕೊಳ್ಳಲಾಗಿದ್ದು, ಆಸಕ್ತ ಸೈಕ್ಲಿಂಗ್ ಪ್ರಿಯರು ಹಾಗೂ ಸಾರ್ವಜನಿಕರು ಭಾಗವಹಿಸಬಹುದಾಗಿದ್ದು, https://docs.google.com/forms/d/e/1FAIpQLScOTYctEtE7i-RZiv4pC6l_yAZCXb-35Wcuvhdlod6kHPhlNeA/viewform?usp=publish-editor ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ವಿಶೇಷ ಸ್ಪರ್ಧೆ: ಈ ಬಾರಿಯ ಥೀಮ್ ಆಧರಿಸಿ ಸಾಮಾಜಿಕ ಮಾಧ್ಯಮಗಳಾದ ಇನ್‌ಸ್ಟಾಗ್ರಾಮ್, ಫೇಸ್‌ಬುಕ್ ಮುಂತಾದ ವೇದಿಕೆಗಳಲ್ಲಿ ಕಂಟೆಂಟ್ ಕ್ರಿಯೇಷನ್ (Content Creation) ವಿಶೇಷ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೊಪ್ಪಳ ಜಿಲ್ಲಾಡಳಿತವು ತಿಳಿಸಿದೆ.

### 101 ಮುತ್ತೈದೆಯರಿಗೆ ಸೀರೆ ಕೊಡುಗೆ; ಡಾ. ತೌಫೀಕ್ ಪಾರ್ಥನಳ್ಳಿ ನೇತೃತ್ವದಲ್ಲಿ ಸೇವಾ ಸ್ಪರ್ಶ

## ಭಕ್ತಿ–ಸೌಹಾರ್ದದ ಸಂಭ್ರಮದಲ್ಲಿ 'ಬಸ್‌ಸ್ಟ್ಯಾಂಡ್ ಕಾ ರಾಜಾ'ಗೆ ಭಕ್ತಿಪೂರ್ವಕ ವಿದಾಯ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ:** ಗಣೇಶೋತ್ಸವದ ಅಂಗವಾಗಿ ಬೆಳಗ್ಗಿನಿಂದಲೇ ದೇವಸ್ಥಾನ ಹಾಗೂ ಗಣಪತಿ ಮಂಟಪದ ಸುತ್ತಮುತ್ತ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳು ಜರುಗಿದವು. ವಿಶೇಷ ಪೂಜೆ, ಪ್ರಾರ್ಥನೆ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳು ನೆರವೇರಿದ ಬಳಿಕ ಮಹಿಳೆಯರಿಗೆ ಉಡಿ ತುಂಬಿ ಗೌರವ ಸಲ್ಲಿಸಲಾಯಿತು. ನಂತರ ಭಕ್ತರು ಹಾಗೂ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಏರ್ಪಡಿಸಿ, ಹಬ್ಬದ ಸಂಭ್ರಮವನ್ನು ಸಾಮೂಹಿಕವಾಗಿ ಹಂಚಿಕೊಳ್ಳಲಾಯಿತು. ಜಮಖಂಡಿ ತಾಲೂಕಿನ ಸಾವಳಗಿ ಸಮೀಪದ ಚಿಕ್ಕಪಡಸಲಗಿ ಗ್ರಾಮದ ಬಸ್ ನಿಲ್ದಾಣದಲ್ಲಿ ಪ್ರತಿಷ್ಠಾಪಿಸಲಾಗಿದ್ದ 'ಬಸ್‌ಸ್ಟ್ಯಾಂಡ್ ಕಾ ರಾಜಾ' ಗಣಪತಿಗೆ ಗುರುವಾರ ಭಕ್ತಿ, ಸಂಭ್ರಮ ಹಾಗೂ ಸೌಹಾರ್ದತೆಯ ವಾತಾವರಣದಲ್ಲಿ ಅದ್ದೂರಿಯಾಗಿ ವಿದಾಯ ನೀಡಲಾಯಿತು.

**101 ಮುತ್ತೈದೆಯರಿಗೆ ಸೀರೆ ಕೊಡುಗೆ:** ಗಣೇಶೋತ್ಸವಕ್ಕೆ ಸಾಮಾಜಿಕ ಸೇವೆಯ ಸ್ಪರ್ಶ ನೀಡುವ ಉದ್ದೇಶದಿಂದ ಜಮಖಂಡಿಯ ಕಾಂಗ್ರೆಸ್ ಮುಖಂಡ ಡಾ. ತೌಫೀಕ್ ಪಾರ್ಥನಳ್ಳಿ ಅವರ ನೇತೃತ್ವದಲ್ಲಿ 101 ಮುತ್ತೈದೆಯರಿಗೆ ಸೀರೆಗಳನ್ನು ಕೊಡುಗೆಯಾಗಿ ನೀಡಲಾಯಿತು. ಮಹಿಳೆಯರನ್ನು ಗೌರವಿಸುವ ಹಾಗೂ ಹಬ್ಬದ ಸಂತಸವನ್ನು ಅವರೊಂದಿಗೆ ಹಂಚಿಕೊಳ್ಳುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಈ ಸೇವಾ ಕಾರ್ಯವು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಯಿತು.

ಸೀರೆಗಳನ್ನು ಸ್ವೀಕರಿಸಿದ ಮಹಿಳೆಯರ ಮುಖದಲ್ಲಿ ಸಂತಸ ಮನೆಮಾಡಿತ್ತು. ಧಾರ್ಮಿಕ ಆಚರಣೆಗಳ ಜತೆಗೆ ಸಮಾಜಮುಖಿ ಕಾರ್ಯಗಳಿಗೆ ಆದ್ಯತೆ ನೀಡುವ ಮೂಲಕ ಗಣೇಶೋತ್ಸವವು ಕೇವಲ ಹಬ್ಬದ ಆಚರಣೆಯಾಗದೆ, ಪರಸ್ಪರ ಪ್ರೀತಿ, ಗೌರವ, ಸಹಕಾರ ಹಾಗೂ ಸೇವಾ ಮನೋಭಾವ ಬೆಳೆಸುವ ವೇದಿಕೆಯಾಗಿದೆ ಎಂಬ ಸಂದೇಶ ಮೂಡಿತು.

**ಡೊಳ್ಳು–ಕರಡಿ ಮಜಲಿಗೆ ಕುಣಿದ ಯುವಕರು:** ಸಂಜೆ ನಡೆದ ಗಣೇಶ ಮೂರ್ತಿಯ ವಿಸರ್ಜನಾ ಮೆರವಣಿಗೆ ಗ್ರಾಮಸ್ಥರ ಗಮನ ಸೆಳೆಯಿತು. ಡೊಳ್ಳು, ಕರಡಿ ಮಜಲು ಸೇರಿದಂತೆ ವಿವಿಧ ಸಾಂಪ್ರದಾಯಿಕ ವಾದ್ಯಗಳ ನಿನಾದಕ್ಕೆ ಚಿಕ್ಕಪಡಸಲಗಿ ಗ್ರಾಮದ ಪ್ರಮುಖ ಬೀದಿಗಳು ಮೊಳಗಿದವು.



ಯುವಕರು ಉತ್ಸಾಹದಿಂದ ಹೆಜ್ಜೆ ಹಾಕಿದರೆ, ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ ನೂರಾರು ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡು ಗಣಪತಿಗೆ ಭಕ್ತಿಭಾವದಿಂದ ವಿದಾಯ ಹೇಳಿದರು. ಮೆರವಣಿಗೆಯುದ್ದಕ್ಕೂ 'ಗಣಪತಿ ಬಪ್ಪಾ ಮೋರಿಯಾ' ಘೋಷಣೆಗಳು ಮೊಳಗಿದ್ದು, ಭಕ್ತಿಯ ವಾತಾವರಣ ಮತ್ತಷ್ಟು ಗಟ್ಟಿಗೊಂಡಿತು.

**ಭಕ್ತಿ ಜೊತೆಗೆ ಸೌಹಾರ್ದದ ಸಂದೇಶ:** ಗಣೇಶ ವಿಸರ್ಜನಾ ಕಾರ್ಯಕ್ರಮದಲ್ಲಿ ಗ್ರಾಮದ ವಿವಿಧ ಸಮುದಾಯಗಳ ಜನರು ಒಟ್ಟಾಗಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಧಾರ್ಮಿಕ ಆಚರಣೆಗಳೊಂದಿಗೆ ಸಾಮಾಜಿಕ ಸೇವೆ ಹಾಗೂ ಪರಸ್ಪರ ಸೌಹಾರ್ದವನ್ನು ಬೆಸೆಯುವ ಮೂಲಕ ಚಿಕ್ಕಪಡಸಲಗಿಯ ಗಣೇಶೋತ್ಸವ ಗಮನ ಸೆಳೆಯಿತು.

ಉತ್ಸವದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಹಲವು ದಿನಗಳಿಂದ ಸಂಭ್ರಮದ ವಾತಾವರಣ ನಿರ್ಮಾಣವಾಗಿತ್ತು. ಗಣಪತಿ ಪ್ರತಿಷ್ಠಾಪನೆಯಿಂದ ಹಿಡಿದು ಪೂಜೆ, ಧಾರ್ಮಿಕ ಕಾರ್ಯಕ್ರಮಗಳು, ಅನ್ನಸಂತರ್ಪಣೆ ಹಾಗೂ ವಿಸರ್ಜನಾ ಮೆರವಣಿಗೆಯವರೆಗೆ ವಿವಿಧ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿದ್ದರು. ಯುವಕ ಮಂಡಳಿ ಸದಸ್ಯರು, ಮಹಿಳೆಯರು, ಭಕ್ತರು, ಸಾರ್ವಜನಿಕರು ಹಾಗೂ ಗ್ರಾಮದ ಗಣ್ಯರು ಸೇರಿದಂತೆ ಹಲವು ಮಂದಿ ವಿಸರ್ಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಡೊಳ್ಳು–ಕರಡಿ ಮಜಲಿನ ಸದ್ದು, ಯುವಕರ ಉತ್ಸಾಹ, ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಹಾಗೂ ಭಕ್ತರ ಘೋಷಣೆಗಳಿಂದ ಚಿಕ್ಕಪಡಸಲಗಿ ಗ್ರಾಮದಲ್ಲಿ ಹಬ್ಬದ ವಾತಾವರಣ ಕಳೆಗಟ್ಟಿತ್ತು.

**ಸೇವೆಯ ಮೂಲಕ ಅರ್ಥಪೂರ್ಣಗೊಂಡ ಉತ್ಸವ:** ಗಣೇಶೋತ್ಸವದ ಸಂಭ್ರಮದ ಜತೆಗೆ 101 ಮುತ್ತೈದೆಯರಿಗೆ ಸೀರೆ ಕೊಡುಗೆ ನೀಡುವ ಮೂಲಕ ಸಾಮಾಜಿಕ ಕಾಳಜಿಗೆ ಆದ್ಯತೆ ನೀಡಿರುವುದು ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ತಂದಿತು. ಧಾರ್ಮಿಕ ಆಚರಣೆಗಳು ಸಮಾಜಮುಖಿ ಚಿಂತನೆ, ಸೇವೆ ಹಾಗೂ ಸೌಹಾರ್ದದೊಂದಿಗೆ ಬೆಸೆದುಕೊಂಡಾಗ ಉತ್ಸವದ ಅರ್ಥ ಮತ್ತಷ್ಟು ವಿಸ್ತರಿಸುತ್ತದೆ ಎಂಬ ಸಂದೇಶವನ್ನು ಕಾರ್ಯಕ್ರಮ ಸಾರಿತು.

ಭಕ್ತಿ, ಸಂಭ್ರಮ, ಸೇವೆ ಮತ್ತು ಸೌಹಾರ್ದತೆಯ ಸಂಗಮದೊಂದಿಗೆ 'ಬಸ್‌ಸ್ಟ್ಯಾಂಡ್ ಕಾ ರಾಜಾ' ಗಣಪತಿಗೆ ಗ್ರಾಮಸ್ಥರು ಭಕ್ತಿಪೂರ್ವಕವಾಗಿ ವಿದಾಯ ಹೇಳಿ, ಮುಂದಿನ ವರ್ಷ ಮತ್ತೆ ಅದೇ ಉತ್ಸಾಹದಿಂದ ಗಣಪತಿ ಸ್ವಾಗತಿಸುವ ನಿರೀಕ್ಷೆಯೊಂದಿಗೆ ವಿಸರ್ಜನಾ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದರು.

# ಇ-ಕೆವೈಸಿ ಪ್ರಕ್ರಿಯೆಗಾಗಿ ಆಧಾರ್ ಬಯೋಮೆಟ್ರಿಕ್

## ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 31 ಆಧಾರ್ ಕೇಂದ್ರಗಳು ಕಾರ್ಯಾರಂಭ: ಸೇವೆ ಪಡೆದುಕೊಳ್ಳಲು ಜಿಲ್ಲಾಧಿಕಾರಿಗಳ ಮನವಿ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ :**
ಕೊಪ್ಪಳ ಜಿಲ್ಲೆಯಲ್ಲಿ ಪಡಿತರ ಚೀಟಿಯ ಇ-ಕೆವೈಸಿ ಪ್ರಕ್ರಿಯೆಗಾಗಿ ಆಧಾರ್ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಿಸಿಕೊಳ್ಳಲು ಸಾರ್ವಜನಿಕರು ಪರದಾಡುತ್ತಿರುವ ಹಿನ್ನೆಲೆಯಲ್ಲಿ, ಜಿಲ್ಲಾಡಳಿತವು ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಒಟ್ಟು 31 ಅಧಿಕೃತ ಆಧಾರ್ ಕೇಂದ್ರಗಳ ಪಟ್ಟಿಯನ್ನು ಪ್ರಕಟಿಸಿದೆ.

ಸಾರ್ವಜನಿಕರು ಕೇವಲ ಜಿಲ್ಲಾಧಿಕಾರಿಗಳ ಕಚೇರಿ ಅಥವಾ ತಹಶೀಲ್ದಾರ್ ಕಚೇರಿಗಳಿಗೆ ಬಂದು ಅಲೆಯುವುದನ್ನು ತಪ್ಪಿಸಿ, ತಮಗೆ ಸಮೀಪವಿರುವ ಕೇಂದ್ರಗಳಲ್ಲೇ ಸೇವೆ ಪಡೆದುಕೊಳ್ಳುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ತಿಳಿಸಿದ್ದಾರೆ.

ಕೊಪ್ಪಳ ತಾಲೂಕಿನಲ್ಲಿ ಒಟ್ಟು 7 ಕೇಂದ್ರಗಳು: ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 2 ಕೇಂದ್ರಗಳು, ಕೊಪ್ಪಳ ತಹಶೀಲ್ದಾರ್ ಕಾರ್ಯಾಲಯ, ಕೇಂದ್ರ ಬಸ್ ನಿಲ್ದಾಣದ ಹತ್ತಿರವಿರುವ ಮಾಲತೇಶ ಹೊಟೇಲ್ ಹಿಂಭಾಗದ ಕಾಮನ್ ಸರ್ವಿಸ್ ಸೆಂಟ-ರ್, ಹೆಡ್ ಪೋಸ್ಟ್ ಆಫೀಸ್, ಬಿ.ಎಸ್.ಎನ್.ಎಲ್. ಕಚೇರಿ ಮತ್ತು ಬ್ಯಾಂಕ್ ಆಫ್ ಬರೋಡಾ ಶಾಖೆ ಹಾಗೂ ಅಳವಂಡಿ ಹೋಬಳಿಯ ನಾಡ ಕಚೇರಿ ಸೇರಿದಂತೆ ಕೊಪ್ಪಳ ತಾಲೂಕಿನಲ್ಲಿ ಒಟ್ಟು 7 ಕೇಂದ್ರಗಳಲ್ಲಿ ಆಧಾರ್ ಸೇವೆ ಲಭ್ಯವಿದೆ.

ಕುಷ್ಟಗಿ ತಾಲೂಕು ಒಟ್ಟು 8 ಕೇಂದ್ರಗಳು: ಕುಷ್ಟಗಿ ತಹಶೀಲ್ದಾರ್ ಕಾರ್ಯಾಲಯ, ಹೆಡ್ ಪೋಸ್ಟ್ ಆಫೀಸ್, ಬಸ್ ನಿಲ್ದಾಣದ ಎದುರಿನ ಬಸವ ಕಾಂಪ್ಲೆಕ್ಸ್‌ನಲ್ಲಿರುವ ಕರ್ನಾಟಕ ಒನ್ ಕೇಂದ್ರ, ಹನುಮಸಾಗರ ನಾಡಕಚೇರಿ ಹಾಗೂ ಎಸ್.ಬಿ.ಐ ಬ್ಯಾಂಕ್ (2 ಕೇಂದ್ರಗಳು), ತಾವರಗೇರಾ ನಾಡಕಚೇರಿ, ತಾವರಗೇರಾ ಪಟ್ಟಣದ ಅಂಬೇಡ್ಕರ್ ವೃತ್ತದ ಸಮೀಪದ ಕರ್ನಾಟಕ ಒನ್ ಕೇಂದ್ರ ಮತ್ತು ಹನುಮನಾಳ ನಾಡ ಕಚೇರಿ ಒಳಗೊಂಡಂತೆ ಕುಷ್ಟಗಿ ತಾಲೂಕಿನಲ್ಲಿ ಒಟ್ಟು 8 ಕೇಂದ್ರಗಳಿವೆ.

ಕಾರಟಗಿ ತಾಲೂಕು ಒಟ್ಟು 4 ಕೇಂದ್ರಗಳು: ಕಾರಟಗಿ ಪಟ್ಟಣದ ನಾಡಕಚೇರಿ, ಪೋಸ್ಟ್ ಆಫೀಸ್, ನವಲಿ ರಸ್ತೆಯಲ್ಲಿರುವ ವೆಂಕಣ್ಣ ಶೆಟ್ಟಿ ಪ್ಲಾಜಾದ ಕರ್ನಾಟಕ ಒನ್ ಕೇಂದ್ರ ಹಾಗೂ ಸಿದ್ದಾಪೂರ ಗ್ರಾಮದ ನಾಡಕಚೇರಿ ಎದುರಿನ ಕರ್ನಾಟಕ ಒನ್ ಕೇಂದ್ರ ಸೇರಿ ಕಾರಟಗಿ ತಾಲೂಕು ಒಟ್ಟು 4 ಕೇಂದ್ರಗಳಿವೆ.

ಗಂಗಾವತಿ ತಾಲೂಕಿನಲ್ಲಿ 4 ಕೇಂದ್ರಗಳು: ಗಂಗಾವತಿ ತಹಶೀಲ್ದಾರ್ ಕಚೇರಿ, ನಗರದ ಹೆಡ್ ಪೋಸ್ಟ್ ಆಫೀಸ್, ಎಪಿಎಂಸಿ ಪೋಸ್ಟ್ ಆಫೀಸ್ ಹಾಗೂ ಮರಳಿ ನಾಡ ಕಚೇರಿ.

ಯಲಬುರ್ಗಾ ತಾಲೂಕು ಒಟ್ಟು 3 ಕೇಂದ್ರಗಳು: ಯಲಬುರ್ಗಾ




ತಹಶೀಲ್ದಾರ್ ಕಾರ್ಯಾಲಯ, ಪೋಸ್ಟ್ ಆಫೀಸ್ ಎದುರಿನ ಕರ್ನಾಟಕ ಒನ್ ಕೇಂದ್ರ ಹಾಗೂ ಪೋಸ್ಟ್ ಆಫೀಸ್ ಒಳಗೊಂಡಂತೆ ಗಂಗಾವತಿ ತಾಲೂಕು ಒಟ್ಟು 4 ಕೇಂದ್ರಗಳಿವೆ.

ಕುಕನೂರು ತಾಲೂಕಿನಲ್ಲಿ 3 ಕೇಂದ್ರಗಳು: ಕುಕನೂರು ತಹಶೀಲ್ದಾರ್ ಕಾರ್ಯಾಲಯ, ಪಟ್ಟಣದ ಎಸ್.ಬಿ.ಐ ಬ್ಯಾಂಕ್ ಹಾಗೂ ಪಟ್ಟಣದ ಪೋಸ್ಟ್ ಆಫೀಸ್ ಸೇರಿ ಕುಕನೂರು ತಾಲೂಕು ಒಟ್ಟು 3 ಕೇಂದ್ರಗಳಿವೆ.

ಕನಕಗಿರಿ ತಾಲೂಕಿನಲ್ಲಿ 2 ಕೇಂದ್ರಗಳು: ನಾಡ ಕಾರ್ಯಾಲಯ ಹಾಗೂ ಪಟ್ಟಣದ ಪೋಸ್ಟ್ ಆಫೀಸ್.

ಗ್ರಾಮ ಒನ್ ಕೇಂದ್ರಗಳು: ಪಡಿತರ ಚೀಟಿ ಇ-ಕೆವೈಸಿ ಹೊರತುಪಡಿಸಿ, ಮೊಬೈಲ್ ಸಂಖ್ಯೆ ಹಾಗೂ ವಿಳಾಸ ತಿದ್ದುಪಡಿಯಂತಹ ಸೇವೆಗಳನ್ನು ಜಿಲ್ಲೆಯಾದ್ಯಂತ ಇರುವ 55 ಗ್ರಾಮ ಒನ್ ಕೇಂದ್ರಗಳಲ್ಲಿ ಪಡೆದುಕೊಳ್ಳಬಹುದು.

ಮಕ್ಕಳ ನೋಂದಣಿ ಮತ್ತು ಮನೆ ಬಾಗಿಲಿಗೆ ಸೇವೆ: 0–5 ವರ್ಷದೊಳಗಿನ ಮಕ್ಕಳ ಆಧಾರ್ ನೋಂದಣಿ ಹಾಗೂ ಮೊಬೈಲ್ ನಂಬರ್ ಲಿಂಕ್/ತಿದ್ದುಪಡಿಗಾಗಿ ಅಂಚೆ ಇಲಾಖೆಯ (ಐಪಿಪಿಬಿ) ಪೋಸ್ಟ್‌ಮ್ಯಾನ್ ಅಥವಾ ಡಾಕ್ ಸೇವಕರ ಬಳಿ ಇರುವ 101 ಮೊಬೈಲ್ ಕಿಟ್‌ಗಳ ಮೂಲಕ ಸುಲಭವಾಗಿ ಸೇವೆ ಪಡೆಯಬಹುದಾಗಿದೆ.

ಆದ್ದರಿಂದ ಕೊಪ್ಪಳ ಜಿಲ್ಲೆಯ ಸಮಸ್ತ ನಾಗರಿಕರು ದೂರದ ತಾಲೂಕು ಕೇಂದ್ರಗಳಿಗೆ ಅಲೆದಾಡದೆ, ಸ್ಥಳೀಯವಾಗಿ ಲಭ್ಯವಿರುವ ಈ ಕೇಂದ್ರಗಳಿಗೆ ತೆರಳಿ ತಮ್ಮ ಆಧಾರ್ ತಿದ್ದುಪಡಿ ಹಾಗೂ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೀಚಿಯ ಬದುಕು ಮತ್ತು ಸಾಹಿತ್ಯದ ಮೆಲುಕು; ಅಬ್ಬಿಗೇರಿಯಲ್ಲಿ ಸೆ.26 ರಂದು ಮಾಸಿಕ ಸಭೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಕನ್ನಡ ಸಾಹಿತ್ಯದಲ್ಲಿ ಹಾಸ್ಯ, ವ್ಯಂಗ್ಯ ಹಾಗೂ ಸಾಮಾಜಿಕ ಕಳಕಳಿಯ ಮೂಲಕ ವಿಶಿಷ್ಟ ಛಾಪು ಮೂಡಿಸಿದ ಬೀಚಿಯವರ ಬದುಕು ಮತ್ತು ಸಾಹಿತ್ಯವನ್ನು ಪರಿಚಯಿಸುವ ನಿಟ್ಟಿನಲ್ಲಿ ನರೇಗಲ್ಲದ ಬೀಚಿ ಬಳಗ ಹಾಗೂ ಅಬ್ಬಿಗೇರಿಯ ಸದ್ಗುರು ಯಲ್ಲಾಲಿಂಗೇಶ್ವರಮಠದ ಸಂಯುಕ್ತ ಆಶ್ರಯದಲ್ಲಿ ಮಾಸಿಕ ಸಭೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮವು ಸೆ.26ರಂದು ಶನಿವಾರ ಸಂಜೆ 4 ಗಂ-ಟೆಗೆ ಸಮೀಪದ ಅಬ್ಬಿಗೇರಿಯ ಸದ್ಗುರು ಯಲ್ಲಾಲಿಂಗೇಶ್ವರಮಠದಲ್ಲಿ ನಡೆಯಲಿದೆ.



ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸದ್ಗುರು ಯಲ್ಲಾಲಿಂಗೇಶ್ವರಮಠದ ಡಾ. ಬಸವರಾಜ ಶರಣರು ವಹಿಸಲಿದ್ದು, ನರೇಗಲ್ಲ ಬೀಚಿ ಬಳಗದ ಅಧ್ಯಕ್ಷ ಶಿವಯೋಗಿ ಜಕ್ಕಲಿ ಅಧ್ಯಕ್ಷತೆ ವಹಿಸಲಿದ್ದಾರೆ. ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ್ ಜಿ. ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಅಬ್ಬಿಗೇರಿ ಕಲಾಕಾಶಿ ಸಂಸ್ಥಾಪಕ ಡಾ. ಡಿ.ಎ. ಉಪಾಧ್ಯ ಅವರು 'ಬೀಚಿ ಜೀವನ ಮತ್ತು ಸಾಹಿತ್ಯ' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಬೀಚಿಯವರ ಜೀವನಾನುಭವ, ಸಾಹಿತ್ಯದ ವೈಶಿಷ್ಟ್ಯ, ಹಾಸ್ಯ-ವ್ಯಂಗ್ಯದ ಮೂಲಕ ಸಮಾಜದ ವಿವಿಧ ಆಯಾಮಗಳನ್ನು ಕಟ್ಟಿ-ಕೊಟ್ಟ ರೀತಿ ಹಾಗೂ ಅವರ ಬರಹಗಳಲ್ಲಿನ ಸಾಮಾಜಿಕ ಸಂದೇಶಗಳ ಕುರಿತು ವಿಚಾರ ಮಂಡಿಸಲಿದ್ದಾರೆ.

ಬೀಚಿಯವರ ಸಾಹಿತ್ಯ ಕೇವಲ ನಗಿಸುವುದಕ್ಕೆ ಸೀಮಿತವಾಗಿರದೆ, ನಗುವಿನ ಹಿಂದೆಯೇ ಬದುಕಿನ ವಾಸ್ತವತೆಗಳನ್ನು ತೆರೆದಿಡುವ ಶಕ್ತಿಯನ್ನು ಹೊಂದಿದೆ. ಸರಳ ಭಾಷೆ, ಚುಟುಕಾದ ನಿರೂಪಣೆ ಹಾಗೂ ವ್ಯಂಗ್ಯಮಿಶ್ರಿತ ಬರಹಗಳ ಮೂಲಕ ಅವರು ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಅವರ ಸಾಹಿತ್ಯದಲ್ಲಿನ ಸಾಮಾಜಿಕ ಕಳಕಳಿ ಹಾಗೂ ಜೀವನಾನುಭವಗಳು ಇಂದಿಗೂ ಓದುಗರನ್ನು ಚಿಂತನೆಗೆ ಹಚ್ಚುತ್ತವೆ.

ಬೀಚಿಯವರ ಸಾಹಿತ್ಯವನ್ನು ಮತ್ತೊಮ್ಮೆ ಮೆಲುಕು ಹಾಕುವುದರ ಜತೆಗೆ, ಅವರ ಬರಹಗಳ ಪರಿಚಯವನ್ನು ಹೊಸ ತಲೆಮಾರಿಗೆ ತಲುಪಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾಹಿತ್ಯಾಸಕ್ತರು, ಬೀಚಿ ಅಭಿಮಾನಿಗಳು, ಕನ್ನಡ ಸಾಹಿತ್ಯ ಪ್ರೇಮಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

# ಮೊಬೈಲ್‌ಗೆ ಬ್ರೇಕ್ ಹಾಕಿ, ಸರ್ಕಾರಿ ಉದ್ಯೋಗದತ್ತ ಫೋಕಸ್ ಮಾಡಿ: ಪಟ್ಟೇದ್

**ಸತ್ಯಮಿಥ್ಯ ಸುದ್ದಿಮೂಲ, ಯಲಬುರ್ಗಾ :**
ಇಂದಿನ ಯುವಜನತೆ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಕಾಲಹರಣ ಮಾಡುವ ಬದಲು, ಪದವಿ ಹಂತದಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಿ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಪ್ರಸಿದ್ಧ ಸಂಪನ್ಮೂಲ ವ್ಯಕ್ತಿ ಮಹೇಶ್ ಪಟ್ಟೇದ್ ಕರೆ ನೀಡಿದರು.

ಇಲ್ಲಿನ ಹಿರೇವಂಕಲಕುಂಟದ ಶ್ರೀಮತಿ ಶಾಂತಾಬಾಯಿ ಅಡವಿರಾವ್ ಕುಲಕರ್ಣಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ, ಐ.ಕ್ಯು.ಎ.ಸಿ ಮತ್ತು ವಾಣಿಜ್ಯಶಾಸ್ತ್ರ ವಿಭಾಗದ ಜಂಟಿ ಆಶ್ರಯದಲ್ಲಿ ಆಯೋಜಿಸಲಾಗಿದ್ದ "ಕೆಇಎ /ಕೆ ಪಿ ಎಸ್ ಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳು" ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪದವಿ ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, "ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಪಡೆಯಲು ನಿರಂತರ ಅಧ್ಯಯನ, ಪ್ರಚಲಿತ ವಿದ್ಯಮಾನಗಳ ಅರಿವು, ಸಮಯ ನಿರ್ವಹಣೆ ಹಾಗೂ ಸರಿಯಾದ ಯೋಜನಾಬದ್ಧ ಅಧ್ಯಯನ ಅತ್ಯಗತ್ಯ. ಮೊಬೈಲ್ ಸ್ಕ್ರೋಲ್ ಮಾಡುವ ಸಮಯವನ್ನು ಕಡಿಮೆ ಮಾಡಿ ನಿಮ್ಮ ಗುರಿಯತ್ತ ಹೆಜ್ಜೆ ಇಡಿ. ಇಂದಿನ ಪರಿಶ್ರಮವೇ ನಾಳೆಯ ಯಶಸ್ಸಿಗೆ ಭದ್ರ ಬುನಾದಿ" ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾಂತೇಶ್ ಗೆದಗೇರಿ ಅವರು ಮಾತನಾಡಿ, "ಕೆಇಎ /ಕೆ ಪಿ ಎಸ್ ಸಿ ಸೇರಿದಂತೆ ವಿವಿಧ ಪರೀಕ್ಷೆಗಳಲ್ಲಿ ವಿಜ್ಞಾನ ಮತ್ತು ಪ್ರಚಲಿತ ವಿದ್ಯಮಾನಗಳ ವಿಷಯಗಳು ನಿರ್ಣಾಯಕ ಪಾತ್ರ ವಹಿಸುತ್ತವೆ ಎಂದು ಮಾರ್ಗದರ್ಶನ ಮಾಡಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಉಪನ್ಯಾಸಕಿ ವೀಣಾ ಅವರು ನೀಡಿದರೆ, ಪೂರ್ಣಿಮಾ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಐ.ಕ್ಯು.ಎ.ಸಿ ಘಟಕದ ಮಲ್ಲೇಶ್ ನಾಯಕ್ ಹಾಗೂ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಕುಮಾರಿ ಫರೀನಾ ಬೇಗಂ ಕಾರ್ಯಕ್ರಮದ ಸಂಚಾಲಕರಾಗಿ ಜವಾಬ್ದಾರಿ ನಿರ್ವಹಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಸಿಬ್ಬಂದಿಗಳಾದ ಶರಣಬಸವ, ದೇವರಾಜ ಸೇರಿದಂತೆ ಎಲ್ಲಾ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಜಾನಪದ ಪರಿಷತ್ ಗಜೇಂದ್ರಗಡ ಘಟಕಕ್ಕೆ ಎಂ.ಕೆ. ಬೇವಿನಕಟ್ಟಿ ಮರು ನೇಮಕ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಕನ್ನಡ ಜಾನಪದ ಪರಿಷತ್ ಗಜೇಂದ್ರಗಡ ತಾಲೂಕು ಘಟಕದ ಅಧ್ಯಕ್ಷರಾಗಿ ಶಿಕ್ಷಕ ಎಂ.ಕೆ. ಬೇವಿನಕಟ್ಟಿ ಅವರನ್ನು ಮರುನೇಮಕ ಮಾಡಲಾಗಿದೆ.



ಗದಗದ ವಿ.ಡಿ.ಎಸ್.ಟಿ. ಕಾಲೇಜು ಆವರಣದಲ್ಲಿ ಇತ್ತೀಚೆಗೆ ನಡೆದ ಗದಗ ತಾಲೂಕು ಕನ್ನಡ ಜಾನಪದ ಪರಿಷತ್ ಘಟಕದ ಪದಗ್ರಹಣ ಸಮಾರಂಭದಲ್ಲಿ ಪರಿಷತ್ ರಾಜ್ಯಾಧ್ಯಕ್ಷ ಎಸ್. ಬಾಲಾಜಿ ಅವರು ಬೇವಿನಕಟ್ಟಿ ಅವರ ಮರುನೇಮಕವನ್ನು ಪ್ರಕಟಿಸಿದರು.

ಕಳೆದ ಅವಧಿಯಲ್ಲಿ ಗಜೇಂದ್ರಗಡ ತಾಲೂಕು ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಎಂ.ಕೆ. ಬೇವಿನಕಟ್ಟಿ ಅವರು ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಗ್ರಾಮೀಣ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಸಂಘಟಿಸಿ ಘಟಕವನ್ನು ಸಕ್ರಿಯವಾಗಿ ಮುನ್ನಡೆಸಿದ್ದಾರೆ. ಗ್ರಾಮೀಣ ಭಾಗದಲ್ಲಿ ನೆಲೆಗೊಂಡಿರುವ ಜನಪದ ಕಲೆಗಳಿಗೆ ವೇದಿಕೆ ಕಲ್ಪಿಸುವುದು, ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವುದು ಹಾಗೂ ಯುವ ಪೀಳಿಗೆಗೆ ನಮ್ಮ ನೆಲದ ಸಂಸ್ಕೃತಿಯ ಪರಿಚಯ ಮಾಡಿಸುವ ಕಾರ್ಯದಲ್ಲಿ ಅವರು ಆಸಕ್ತಿ ವಹಿಸಿರುವುದನ್ನು ರಾಜ್ಯಾಧ್ಯಕ್ಷ ಎಸ್. ಬಾಲಾಜಿ ಶ್ಲಾಘಿಸಿದರು.

ಇಂದಿನ ಆಧುನಿಕತೆಯ ಭರಾಟೆಯಲ್ಲಿ ಗ್ರಾಮೀಣ ಬದುಕಿನೊಂದಿಗೆ ಬೆಸೆದುಕೊಂಡಿರುವ ಅನೇಕ ಜಾನಪದ ಕಲೆ, ಆಚರಣೆ, ಸಂಪ್ರದಾಯ, ಹಾಡು, ಕಥೆ ಹಾಗೂ ಸ್ಥಳೀಯ ಪರಂಪರೆಗಳು ನಿಧಾನವಾಗಿ ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ಜಾನಪದ ಪರಂಪರೆಯನ್ನು ದಾಖಲಿಸಿ, ಉಳಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ಜಾನಪದ ಪರಿಷತ್ ಮೇಲಿದೆ. ಈ ನಿಟ್ಟಿನಲ್ಲಿ ಗಜೇಂದ್ರಗಡ ತಾಲೂಕು ಘಟಕ ಕಳೆದ ಅವಧಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿರುವುದು ಶ್ಲಾಘನೀಯ ಎಂದು ಎಸ್. ಬಾಲಾಜಿ ಹೇಳಿದರು.

ಗಜೇಂದ್ರಗಡ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಜನಪದ ಕಲೆ ಮತ್ತು ಸಂಸ್ಕೃತಿಯ ಶ್ರೀಮಂತ ಪರಂಪರೆಯಿದ್ದು, ಸ್ಥಳೀಯ ಕಲಾವಿದರು ಹಾಗೂ ಜಾನಪದ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಕಲ್ಪಿಸುವ ಮೂಲಕ ಘಟಕವನ್ನು ಮತ್ತಷ್ಟು ಬಲಪಡಿಸಬೇಕು. ಶಾಲಾ-ಕಾಲೇಜು ವಿದ್ಯಾರ್ಥಿಗಳಲ್ಲಿ ಜಾನಪದದ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ಮರುನೇಮಕಗೊಂಡಿರುವ ಎಂ.ಕೆ. ಬೇವಿನಕಟ್ಟಿ ಅವರು ಮಾತನಾಡಿ, ಪರಿಷತ್ ತಮ್ಮ ಮೇಲೆ ಮತ್ತೊಮ್ಮೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿರುವುದು ಸಂತಸ ತಂದಿದೆ. ಕಳೆದ ಅವಧಿಯಲ್ಲಿ ಎಲ್ಲರ ಸಹಕಾರದಿಂದ ಕೈಗೊಂಡ ಕಾರ್ಯಗಳನ್ನು ಮುಂದುವರಿಸುವುದರ ಜತೆಗೆ, ಗಜೇಂದ್ರಗಡ ತಾಲೂಕಿನಲ್ಲಿ ಜಾನಪದ ಕಲೆ ಹಾಗೂ ಗ್ರಾಮೀಣ ಸಂಸ್ಕೃತಿಗೆ ಇನ್ನಷ್ಟು ವೇದಿಕೆ ಕಲ್ಪಿಸಲು ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ತಿಳಿಸಿದರು. ಜಿಲ್ಲಾಧ್ಯಕ್ಷ ಐ.ಬಿ. ಬೆನಕೋಪ್ಪ ಅವರು ತಾಲೂಕು ಘಟಕದ ಕಾರ್ಯಚಟುವಟಿಕೆಗಳಿಗೆ ಜಿಲ್ಲಾ ಘಟಕದಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕದ ಸದಸ್ಯರಾದ ಬಸವರಾಜ ಕೊಟಗಿ, ಬಿ.ವಿ. ದೇಸಾಯಿಪಟ್ಟಿ ಸೇರಿದಂತೆ ಪರಿಷತ್ ಪದಾಧಿಕಾರಿಗಳು, ಸದಸ್ಯರು ಹಾಗೂ ಜಾನಪದಾಸಕ್ತರು ಉಪಸ್ಥಿತರಿದ್ದರು.

# ಪಠ್ಯೇತರ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಪ್ರತಿಭೆಗೆ ವೇದಿಕೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ :**
ತರಗತಿಯ ನಾಲ್ಕು ಗೋಡೆಗಳೊಳಗೆ ಪಾಠ ಕಲಿಯುವುದು ಮಾತ್ರ ಶಿಕ್ಷಣವಲ್ಲ; ವಿದ್ಯಾರ್ಥಿಯೊಳಗೆ ಅಡಗಿರುವ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಸೂಕ್ತ ವೇದಿಕೆ ಕಲ್ಪಿಸುವುದೂ ಶಿಕ್ಷಣದ ಮಹತ್ವದ ಭಾಗವಾಗಿದೆ. ಈ ನಿಟ್ಟಿನಲ್ಲಿ ನರೇಗಲ್ಲ ಪಟ್ಟಣದ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿನ ವಿವಿಧ ಪಠ್ಯೇತರ ಚಟುವಟಿಕೆಗಳಿಗೆ ಚಾಲನೆ ನೀಡಲು ಸಿದ್ಧತೆ ನಡೆದಿದೆ.

ಕಾಲೇಜಿನ ಸಭಾಂಗಣದಲ್ಲಿ ಸೆ.26ರಂದು ಬೆಳಿಗ್ಗೆ 10.30ಕ್ಕೆ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭ ನಡೆಯಲಿದೆ. ವಿದ್ಯಾರ್ಥಿಗಳಲ್ಲಿ ಅಡಗಿರುವ ಕಲೆ, ಸಾಹಿತ್ಯ, ಕ್ರೀಡೆ, ಸಾಂಸ್ಕೃತಿಕ ಪ್ರತಿಭೆ, ನಾಯಕತ್ವ ಗುಣ ಹಾಗೂ ಸಾಮಾಜಿಕ ಕಾಳಜಿಗೆ ಹೊಸ ಚೈತನ್ಯ ತುಂಬುವ ಈ ಕಾರ್ಯಕ್ರಮವು ವಿದ್ಯಾರ್ಥಿ ಜೀವನದಲ್ಲಿ ಮಹತ್ವದ ಹೆಜ್ಜೆಯಾಗಲಿದೆ.

ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಜಿ.ಎಸ್. ಪಾಟೀಲ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲರಾದ ಡಾ. ಕಸ್ತೂರೆವ್ವ ಬಿ. ದಳವಾಯಿ ಅಧ್ಯಕ್ಷತೆ ವಹಿಸಲಿದ್ದಾರೆ. ಗದಗ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತ-ಕೋತ್ತರ ಅಧ್ಯಯನ ಕೇಂದ್ರದ ಪ್ರಾಂಶುಪಾಲರಾದ ಡಾ. ಶಿವಪ್ಪ ಎಂ. ಕುರಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಗ್ರಾಮೀಣ ಭಾಗದಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳಲ್ಲಿ ಓದಿನ ಜತೆಗೆ ಕಲೆ, ಸಾಹಿತ್ಯ, ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಬಗ್ಗೆ ವಿಶೇಷ ಆಸಕ್ತಿ ಇರುತ್ತದೆ. ಆದರೆ ಎಲ್ಲರಿಗೂ ತಮ್ಮ ಪ್ರತಿಭೆ ಪ್ರದರ್ಶಿಸಲು ವೇದಿಕೆ ಸಿಗುವುದಿಲ್ಲ. ಇಂತಹ ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ನೀರೆರೆದು ಬೆಳೆಸುವ ಕೆಲಸ ಪಠ್ಯೇತರ ಚಟುವಟಿಕೆಗಳಿಂದ ಆಗಬೇಕಿದೆ.

ವಿದ್ಯಾರ್ಥಿಗಳ ಬದುಕಿನಲ್ಲಿ ಪಠ್ಯೇತರ ಚಟುವಟಿಕೆಗಳು ಕೇವಲ ಮನರಂಜನೆಯ ಭಾಗವಲ್ಲ. ವೇದಿಕೆಯ ಮೇಲೆ ನಿಂತು ಮಾತನಾಡುವ ಧೈರ್ಯ, ತಂಡವಾಗಿ ಕೆಲಸ ಮಾಡುವ ಮನೋಭಾವ, ಸೋಲು-ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ಗುಣ ಹಾಗೂ ಸಮಾಜದೊಂದಿಗೆ ಬೆರೆಯುವ ವಿಶಾಲ ಮನಸ್ಸನ್ನು ಬೆಳೆಸುವ ಜೀವಂತ ಪಾಠಶಾಲೆಯಾಗಿವೆ. ಪುಸ್ತಕದ ಜ್ಞಾನಕ್ಕೆ ಬದುಕಿನ ಅನುಭವವನ್ನು ಜೋಡಿಸುವ ಸೇತುವೆಯಾಗಿ ಇವು ಕಾರ್ಯನಿರ್ವಹಿಸುತ್ತವೆ.

ಕಾಲೇಜಿನ ವೇದಿಕೆ ಎನ್ನುವುದು ಕೇವಲ ಕಾರ್ಯಕ್ರಮ ನಡೆಯುವ ಸ್ಥಳವಲ್ಲ. ಅದು ನಾಳೆಯ ಕಲಾವಿದ, ಕ್ರೀಡಾಪಟು, ವಾಗ್ಮಿ, ನಾಯಕ ಹಾಗೂ ಸಮಾಜಮುಖಿ ವ್ಯಕ್ತಿತ್ವ ರೂಪುಗೊಳ್ಳುವ ಜಾಗವೂ ಹೌದು. ಗ್ರಾಮೀಣ ಪ್ರತಿಭೆಗಳಿಗೆ ಇಂತಹ ಅವಕಾಶಗಳು ಸಿಕ್ಕಾಗ ಅವರಲ್ಲಿ ಆತ್ಮವಿಶ್ವಾಸ ಹೆಚ್ಚುವುದರ ಜತೆಗೆ, ತಮ್ಮೂರಿನ ಹೆಸರು ಬೆಳಗಿಸುವ ಕನಸಿಗೂ ಬಲ ಬರುತ್ತದೆ. ಕಾರ್ಯಕ್ರಮದಲ್ಲಿ ಭೂದಾನಿಗಳಾದ ರಮೇಶ ಕಳಕೊಣ್ಣವರ, ಅಶೋಕ ಕಳಕೊಣ್ಣವರ, ಕಾಲೇಜು ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು, ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ, ಬೋಧಕೇತರ ಹಾಗೂ ಅತಿಥಿ ಉಪನ್ಯಾಸಕ ಸಿಬ್ಬಂದಿ, ವಿದ್ಯಾರ್ಥಿ ಪ್ರತಿನಿಧಿಗಳು ಉಪಸ್ಥಿತರಿರುವರು.

ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲೇ ವಿದ್ಯಾರ್ಥಿಗಳ ಪ್ರತಿಭೆಗೆ ಹೊಸ ದಿಕ್ಕು ನೀಡುವ ಉದ್ದೇಶದಿಂದ ವಿವಿಧ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಓದಿನ ಜತೆಗೆ ಕಲೆ, ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂಬ ಆಶಯ ಕಾಲೇಜಿನದ್ದಾಗಿದೆ.

'ಪ್ರತಿ ವಿದ್ಯಾರ್ಥಿಯಲ್ಲೂ ಒಂದೊಂದು ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ, ಪ್ರೋತ್ಸಾಹಿಸಿ, ಬೆಳೆಸುವ ಹೊಣೆ ಶಿಕ್ಷಣ ಸಂಸ್ಥೆಯದು' ಎಂಬ ಆಶಯದೊಂದಿಗೆ ಚಟುವಟಿಕೆಗಳನ್ನು ರೂಪಿಸಲಾಗಿದೆ ಎಂದು ಸಾಂಸ್ಕೃತಿಕ ವಿಭಾಗದ ಸಂಚಾಲಕ ಅಯ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೈಯಲ್ಲಿ ಪುಸ್ತಕ, ಮನದಲ್ಲಿ ಸೇವಾ ಸಂಕಲ್ಪವಿರಲಿ: ಶಿವಯೋಗಿ ಹಾವೇರಿ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ವಿದ್ಯಾರ್ಥಿಗಳ ಕೈಯಲ್ಲಿ ಪುಸ್ತಕದ ಜತೆಗೆ ಮನದಲ್ಲಿ ಸೇವಾ ಸಂಕಲ್ಪವೂ ಇರಬೇಕು. ಸಮಾಜದೊಂದಿಗೆ ಬೆರೆತು, ಜನರ ಕಷ್ಟ-ಸುಖಗಳಿಗೆ ಸ್ಪಂದಿಸುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಶಿಕ್ಷಣಕ್ಕೆ ನಿಜವಾದ ಅರ್ಥ ದೊರೆಯುತ್ತದೆ ಎಂದು ಶಿವಯೋಗಿ ಹಾವೇರಿ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಗುರುವಾರ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ವತಿಯಿಂದ ಆಯೋಜಿಸಿದ್ದ ಎನ್‌ಎಸ್‌ಎಸ್ ದಿನಾಚರಣೆ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನವು ಕೇವಲ ಅಂಕ, ಪದವಿ ಹಾಗೂ ಉದ್ಯೋಗದ ಸಿದ್ಧತೆಯ ಅವಧಿಯಲ್ಲ. ಅದು ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಅಮೂಲ್ಯ ಕಾಲಘಟ್ಟ. ತರಗತಿಯ ನಾಲ್ಕು ಗೋಡೆಗಳೊಳಗೆ ಕಲಿಯುವ ಜ್ಞಾನದ ಜತೆಗೆ ಸಮಾಜದ ವಾಸ್ತವ ಬದುಕನ್ನು ಅರಿಯಬೇಕು. ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ತಿಳಿದುಕೊಂಡು, ಸಾಧ್ಯವಾದಷ್ಟು ಜನರ ಬದುಕಿಗೆ ನೆರವಾಗುವ ಪ್ರಯತ್ನ ಮಾಡಬೇಕು ಎಂದರು.

ಎನ್‌ಎಸ್‌ಎಸ್ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸಹಬಾಳ್ವೆ, ನಾಯಕತ್ವ ಗುಣ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುತ್ತವೆ. ಸೇವೆ ಮಾಡುವುದರಿಂದ ಪ್ರತಿಫಲ ನಿರೀಕ್ಷಿಸದೆ ಇನ್ನೊಬ್ಬರ ಬದುಕಿನಲ್ಲಿ ಸಂತಸದ ಕ್ಷಣ ಮೂಡಿಸುವ ತೃಪ್ತಿ ದೊರೆಯುತ್ತದೆ. ಅಂತಹ ಅನುಭವಗಳು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಮತ್ತಷ್ಟು ಗಟ್ಟಿಗೊಳಿಸುತ್ತವೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಎನ್‌ಎಸ್‌ಎಸ್‌ನ ಆಶಯಗಳನ್ನು ಅರಿತು ಸೇವಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಚೇರ್ಮನ್ ಎಸ್.ಎ. ಪಾಟೀಲ ಮಾತನಾಡಿ, ತಮ್ಮ ಕಾಲೇಜು ಜೀವನದಲ್ಲಿ ಎನ್‌ಎಸ್‌ಎಸ್‌ನಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗದಿರುವುದು ಇಂದು ನೆನಪಾಗುತ್ತಿದೆ. ಆದರೆ ಪ್ರಸ್ತುತ ವಿದ್ಯಾರ್ಥಿಗಳಿಗೆ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಉತ್ತಮ ಅವಕಾಶವಿದೆ. ಈ ಅವಕಾಶವನ್ನು ಕಳೆದುಕೊಳ್ಳದೆ ಎನ್‌ಎಸ್‌ಎಸ್ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು. ಸೇವಾ ಮನೋಭಾವ ಬೆಳೆಸಿಕೊಂಡು ಉತ್ತಮ ನಾಗರಿಕರಾಗಿ ರೂಪುಗೊಳ್ಳಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ. ಕಲ್ಲಯ್ಯ ಹಿರೇಮಠ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜತೆಗೆ ಸಮಾಜಮುಖಿ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು. ಇದರಿಂದ ಅವರಲ್ಲಿ ಆತ್ಮವಿಶ್ವಾಸ, ನಾಯಕತ್ವ, ಸಹಕಾರ ಮನೋಭಾವ ಹಾಗೂ ಸಾಮಾಜಿಕ ಕಳಕಳಿ ಬೆಳೆಯುತ್ತದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಎನ್‌ಎಸ್‌ಎಸ್ ಚಟುವಟಿಕೆಗಳು ಪೂರಕವಾಗಿದ್ದು, ಕಾಲೇಜಿನ ವತಿಯಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ರಾಮಚಂದ್ರ ಜೆ. ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿನಿ ಪ್ರಗತಿ ಪ್ರಾರ್ಥಿಸಿದರು. ಐಶ್ವರ್ಯ ಎಂ. ರಾಠೋಡ ಪರಿಚಯಿಸಿದರು. ವಿದ್ಯಾಶ್ರೀ ಪೂಜಾರ್ ಹಾಗೂ ರಿಹಾನ್ ನಿರೂಪಿಸಿದರು. ಶ್ವೇತಾ ನೀರಲೋಟಿ ವಂದಿಸಿದರು.

ಡಾ. ಡಿ.ಎಲ್. ಪವಾರ, ಪುಂಡಲೀಕ ಮಾದರ, ಡಾ. ಸಂದೀಪಕುಮಾರ ಕೆ., ಡಾ. ಸಂದೀಪಕುಮಾರ ಬಿ., ಡಾ. ಆರ್.ಆರ್. ಪಾಟೀಲ, ಭರತರಾಜ ಬಳ್ಳಾರಿ, ಡಾ. ಋಷಿಕೇಶ ಪವಾರ, ಡಾ. ನಿರುಪಾಧಿ, ಎಸ್.ಬಿ. ಗೌಡರ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ರೋಣ ಮಂಡಲ ಬಿಜೆಪಿ ವತಿಯಿಂದ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮದಿನಾಚರಣೆ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ :**
ಭಾರತೀಯ ಜನತಾ ಪಾರ್ಟಿ ರೋಣ ಮಂಡಲದ ವತಿಯಿಂದ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮದಿನಾಚರಣೆಯನ್ನು ಶುಕ್ರವಾರ ಮಾಜಿ ಸಚಿವ ಕಳಕಪ್ಪ ಬಂಡಿ ಅವರ ಗೃಹ ಕಚೇರಿಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಸಚಿವ ಶ್ರೀ ಕಳಕಪ್ಪ ಬಂಡಿ ಅವರು, ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರು ಜನಸಂಘದ ಶ್ರೇಷ್ಠ ಸಂಘಟಕರಾಗಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿ, ಸಮಾಜದ ಸಮಗ್ರ ಅಭಿವೃದ್ಧಿಗಾಗಿ 'ಏಕಾತ್ಮ ಮಾನವತಾವಾದ' ರಾಜಕೀಯ ಸಿದ್ಧಾಂತವನ್ನು ಪ್ರತಿಪಾದಿಸಿದ್ದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಮತ್ತು ಅಭಿವೃದ್ಧಿಯ ಸೌಲಭ್ಯಗಳು ತಲುಪಬೇಕು ಎಂಬ ಉದ್ದೇಶದಿಂದ 'ಅಂತ್ಯೋದಯ' ಪರಿಕಲ್ಪನೆಯನ್ನು ಮಂಡಿಸಿದ್ದರು ಎಂದು ಸ್ಮರಿಸಿದರು.

ಪತ್ರಿಕೋದ್ಯಮದ ಮೂಲಕ 'ರಾಷ್ಟ್ರಧರ್ಮ' ಮಾಸಪತ್ರಿಕೆ, 'ಪಾಂಚಜನ್ಯ' ಹಾಗೂ 'ಸ್ವದೇಶ್' ಪತ್ರಿಕೆಗಳ ಮೂಲಕ ರಾಷ್ಟ್ರೀಯ ವಿಚಾರಧಾರೆಗಳನ್ನು ಜನರಲ್ಲಿ ಬಿತ್ತುವ ಕಾರ್ಯವನ್ನು ಅವರು ಮಾಡಿದ್ದರು. ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಆದರ್ಶ, ತತ್ವ ಹಾಗೂ ವಿಚಾರಧಾರೆಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಮಂಡಲ ಅಧ್ಯಕ್ಷರಾದ ಶ್ರೀ ಉಮೇಶ್ ಮಲ್ಲಾಪುರ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಆರ್.ಕೆ. ಚೌಹಾನ್ ಅವರು ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಪಕ್ಷ ಸಂಘಟನೆಗೆ ನೀಡಿದ ಕೊಡುಗೆ, ತ್ಯಾಗ ಮತ್ತು ಸಮರ್ಪಣೆಯನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಮಂಡಲ ಪ್ರಧಾನ ಕಾರ್ಯದರ್ಶಿ ರಮೇಶ್ ವಕ್ಕರ್, ಉಪಾಧ್ಯಕ್ಷರಾದ ಸೂಗುರೇಶ ಕಾಜಗಾರ, ಮಹಾಂತೇಶ ಪೂಜಾರ, ಕರಣ ಬಂಡಿ, ಶಿವರಾಜ ಬಂಡಿ, ರಾಜೇಂದ್ರ ಘೋರ್ಪಡೆ, ಮುದಿಯಪ್ಪ ಕರಡಿ, ರಂಗನಾಥ ಮೇಟಿ, ಶಿವಕುಮಾರ್ ಜಾಧವ, ಮಹೇಶ್ ಮಕ್ತಾಲಿ, ಪರಶು ಗುಡದೂರ, ಅನುರಾಗ ಚಿನಿವಾಲರ ಸೇರಿದಂತೆ ಅನೇಕ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.




# ವಿಬಿಜಿರಾಮ್‌ಜಿ ಯೋಜನೆಯಡಿ ಕೆರೆ ಹೂಳೆತ್ತುವ ಕಾಮಗಾರಿಗೆ ಚಾಲನೆ

## ಚೆನ್ನಾಗಿ ಕೆಲಸ ಮಾಡಿದರೆ ನಿರಂತರ ಕೆಲಸ | ತಾಪಂ ಇಒ ಕಂದಕೂರು

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ :**
ತಾಲೂಕಿನ ಕುಂಟೋಜಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮ್ಯಾಕಲಜೇರಿ ಗ್ರಾಮದಲ್ಲಿ ವಿಬಿ ಜಿ ರಾಮ್ ಜಿ ಯೋಜನೆಯಡಿ ಕೆರೆ ಹೂಳೆತ್ತುವ ಕಾಮಗಾರಿಗೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಾದ ಚಂದ್ರಶೇಖರ ಬಿ ಕಂದಕೂರ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಕೂಲಿಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ನರೇಗಾ ಯೋಜನೆಯ ಬದಲಾಗಿ ಜುಲೈ 1 ರಿಂದ ವಿಬಿ ಜಿ ರಾಮ್ ಜಿ ಯೋಜನೆ ಜಾರಿಯಾಗಿದೆ. ಈ ಯೋಜನೆಯಲ್ಲಿ ಕೂಲಿಯ ಮೊತ್ತ 382 ಆಗಿದೆ. ಒಂದು ಜಾಬ್ ಕಾರ್ಡ್ ಗೆ ವರ್ಷಕ್ಕೆ 100 ದಿನಗಳ ಬದಲಾಗಿ 125 ದಿನಗಳ ಕಾಲ ಕೆಲಸ ನೀಡಲಾಗುತ್ತದೆ. ಕೂಲಿಕಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ವಿಬಿ ಜಿ ರಾಮ್ ಜಿ ಯೋಜನೆಯಲ್ಲಿ ನರೇಗಾ ಕಾಮಗಾರಿಗಳು ಅಷ್ಟೇ ಅಲ್ಲದೆ ಇನ್ನಷ್ಟು ಕಾಮಗಾರಿಗಳನ್ನು ಅಳವಡಿಸಿಕೊಂಡು ಒಟ್ಟು 375 ಅನುಷ್ಠಾನಗೊಳಿಸಲು ಅವಕಾಶ ನೀಡಲಾಗಿದೆ. ಎಲ್ಲರೂ ಈ ಯೋಜನೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಈ ಯೋಜನೆಯಲ್ಲಿ ವೈಯಕ್ತಿಕ ಕಾಮಗಾರಿಗಳ ಜೊತೆಗೆ ಸಮುದಾಯ ಕಾಮಗಾರಿಗಳು ಹೆಚ್ಚಿನ ಆದ್ಯತೆ ನೀಡಲಾಗಿದೆ. ಕೆರೆ ಅಭಿವೃದ್ಧಿ, ಚಕ್ ಡ್ಯಾಂ ನಿರ್ಮಾಣ ಶಾಲಾ ಕೊಠಡಿ, ತೋಟಗಾರಿಕೆ ಬೆಳೆಗಳು, ರೇಷ್ಮೆ ಬೆಳೆ ಬೆಳೆಯಲು ಅವಕಾಶವಿದೆ ಇದರ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು.

ಎನ್.ಎಂಎಂಎಸ್ ಹಾಜರಾತಿ ಕಡ್ಡಾಯವಾಗಿ ಕೂಲಿಕಾರರು ಎರಡು ಬಾರಿ ಹಾಜರಿ ಹಾಕಿದರೆ ಮಾತ್ರ ಕೂಲಿ ಸಿಗಲಿದೆ. ಅಳತೆ ತಕ್ಕಂತೆ ಕೆಲಸ ಮಾಡಿದರೆ ದಿನಕ್ಕೆ 382 ರೂ. ಕೂಲಿ ಮೊತ್ತ ಸಿಗಲಿದೆ. ಸರಿಯಾಗಿ ಕೆಲಸ ಮಾಡದಿದ್ದರೆ ಸಂಪೂರ್ಣ ಕೂಲಿ ಸಿಗುವುದಿಲ್ಲ ಎಂದು ತಿಳಿಸಿದರು. ಈ ವೇಳೆ ಕೂಲಿಕಾರರು ನಿರಂತರ ಕೆಲಸ ಕೊಡಬೇಕು ಎಂದು ಕೇಳಿದರು ನೀವು ಚೆನ್ನಾಗಿ ಕೆಲಸ ಮಾಡಿದರೆ ನಿರಂತರವಾಗಿ ಕೆಲಸ ಕೊಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಾಂತ್ರಿಕ ಸಹಾಯಕ ಅಭಿಯಂತರ ಗುರು ಫಕ್ಕೀರಗೌಡ್ರ, ಡಿಇಒ ಮುದಕಪ್ಪ ದೋಣೆಗುಡ್ಡ, ಜಿಕೆಎಂ ಅನ್ನಪೂರ್ಣ ಹಿರೇಮಠ, ಕಾಯಕ ಬಂಧುಗಳು, ಕೂಲಿಕಾರರು ಇದ್ದರು.



## ಕರ್ನಾಟಕ ಪರ್ವ–2026

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ವಿವಿಧ ರಾಜ್ಯಗಳ ಕುಶಲಕರ್ಮಿಗಳು ತಮ್ಮ ಸಾಂಪ್ರದಾಯಿಕ ಕರಕುಶಲ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ವೇದಿಕೆ ಕಲ್ಪಿಸುವ ಉದ್ದೇಶದಿಂದ "ಕಲೆ ಉಳಿಯಲಿ, ಕೌಶಲ್ಯ ಬೆಳೆಯಲಿ, ಕುಶಲ ಕರ್ಮಿಗಳ ಬದುಕು ಸಮೃದ್ಧವಾಗಲಿ" ಎಂಬ ಆಶಯದೊಂದಿಗೆ ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ "ಕರ್ನಾಟಕ ಪರ್ವ 2026" ಕಾರ್ಯಕ್ರಮವನ್ನು ದಿ: 26.09.2026 ರಿಂದ 30.09.2026 ರವರೆಗೆ ಬೆಂಗಳೂರಿನ ಅರಮನೆ ಮೈದಾನದ "ತ್ರಿಪುರ ವಾಸಿನಿ" ಆವರಣದಲ್ಲಿ ನಡೆಯಲಿದ್ದು, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಉದ್ಘಾಟಿಸಲಿದ್ದಾರೆ.

ಸದರಿ ಐದು ದಿನಗಳ ವೈಭವದಲ್ಲಿ ವಿವಿಧ ಭಾಗಗಳ ಅಲ್ಪಸಂಖ್ಯಾತರ ಸಮುದಾಯದ ಕುಶಲಕರ್ಮಿಗಳು ತಯಾರಿಸಿರುವ ವಿಶಿಷ್ಟ ಕರಕುಶಲ ಮತ್ತು ಸಾಂಪ್ರದಾಯಿಕ ಉತ್ಪನ್ನಗಳನ್ನು ಒಂದೇ ವೇದಿಕೆಯಲ್ಲಿ ಪ್ರದರ್ಶಿಸಲಾಗುವುದು, ಇ-ಕಾಮರ್ಸ್, ಡಿಜಿಟಲ್ ಮಾರ್ಕೆಟಿಂಗ್, ಆಧುನಿಕ ವ್ಯಾಪಾರ ಪದ್ಧತಿಗಳು, ಉದ್ಯಮ ಸಂಪರ್ಕ, ಮಾರುಕಟ್ಟೆ ವಿಸ್ತರಣೆ ಹಾಗೂ ವ್ಯವಹಾರ ಜಾಲಬಂಧನ ಕುರಿತು ಜ್ಞಾನವರ್ಧಕ ತರಬೇತಿ ಜೊತೆಗೆ ಆಕರ್ಷಕ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮಗಳು ಹಾಗೂ ವೈವಿದ್ಯಮಯ ಆಹಾರ ಮೇಳ ಆಯೋಜಿಸಲಾಗಿರುತ್ತದೆ.

ಗದಗ ಜಿಲ್ಲೆಯ ಸಮಸ್ತ ಸಾರ್ವಜನಿಕರು, ಕಲಾಸಕ್ತರು, ಉದ್ಯಮಿಗಳು ವ್ಯಾಪಾರಸ್ಥರು ಹಾಗೂ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕ ಪರ್ವಕ್ಕೆ ಭೇಟಿ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಸೇವೆ ಕೇವಲ ವ್ಯಾಪಾರವಲ್ಲ, ಸಮಾಜ ಸೇವೆ: ಎಡಿಸಿ ಸಿದ್ರಾಮೇಶ್ವರ

**ಕೊಪ್ಪಳ :** ವೈದ್ಯಕೀಯ ಹಾಗೂ ಆರೋಗ್ಯ ಕ್ಷೇತ್ರವು ಕೇವಲ ಆದಾಯ ಗಳಿಸುವ ವ್ಯಾಪಾರವಲ್ಲ, ಅದು ಮೂಲತಃ ಸಾರ್ವಜನಿಕರ ಜೀವ ರಕ್ಷಿಸುವ ಸೇವಾ ಕ್ಷೇತ್ರವಾಗಿದೆ. ಹೀಗಾಗಿ ಫಾರ್ಮಸಿಸ್ಟ್‌ಗಳು ಯಾವುದೇ ಕಾರಣಕ್ಕೂ ವೃತ್ತಿ ನೈತಿಕತೆಯನ್ನು ಬಿಡಬಾರದು ಎಂದು ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಸಲಹೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಹಾರ ಸುರಕ್ಷತೆ ಹಾಗೂ ಔಷಧ ಆಡಳಿತ, ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘ, ಕೊಪ್ಪಳ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘ ಗಂಗಾವತಿ, ಕರ್ನಾಟಕ ರಾಜ್ಯ ಸರಕಾರಿ ಫಾರ್ಮಸಿ ಅಧಿಕಾರಿಗಳ ಸಂಘ ಹಾಗೂ ಜಿಲ್ಲೆಯ ಎಲ್ಲಾ ಫಾರ್ಮಸಿ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಕೊಪ್ಪಳ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಶುಕ್ರವಾರ (ಸೆ. 25ರಂದು) ಆಯೋಜಿಸಲಾಗಿದ್ದ "ವಿಶ್ವ ಫಾರ್ಮಸಿಸ್ಟ್ ದಿನಾಚರಣೆ" ಹಾಗೂ ಜಿಲ್ಲಾ ಮಟ್ಟದ ಉತ್ತಮ ಫಾರ್ಮಸಿಸ್ಟ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಆರೋಗ್ಯಕರ ಭವಿಷ್ಯಕ್ಕಾಗಿ ಫಾರ್ಮಸಿಸ್ಟ್‌ಗಳನ್ನು ಸಬಲೀಕರಿಸುವುದು" ಎಂಬುದು ಈ ಬಾರಿಯ ಧ್ಯೇಯವಾಕ್ಯವಾಗಿದೆ. ಇಂದಿನ ಡಿಜಿಟಲ್ ಹಾಗೂ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ಯುಗದಲ್ಲಿ ನಮ್ಮ ಸಾಂಪ್ರದಾಯಿಕ ಪದ್ಧತಿಗಳನ್ನು ಮೀರಿ, ಹೊಸ ತಂತ್ರಜ್ಞಾನ ಹಾಗೂ ಸುಧಾರಿತ ಜ್ಞಾನವನ್ನು ಅಳವಡಿಸಿಕೊಳ್ಳಬೇಕಿದೆ. ವಿದೇಶಗಳಲ್ಲಿ ಫಾರ್ಮಸಿಸ್ಟ್‌ಗಳು ಚಿಕಿತ್ಸಾ ಪ್ರಕ್ರಿಯೆಯಲ್ಲಿ ಹೆಚ್ಚಿನ ಜವಾಬ್ದಾರಿ ಹೊಂದಿರುತ್ತಾರೆ. ನಮ್ಮಲ್ಲೂ ಫಾರ್ಮಸಿಸ್ಟ್‌ಗಳು ತಮ್ಮ ಕೌಶಲ್ಯ ಮತ್ತು ಜ್ಞಾನವನ್ನು ಉನ್ನತೀಕರಿಸಿಕೊಳ್ಳಲು ನಿರಂತರ ತರಬೇತಿ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವುದು ಅಗತ್ಯವಾಗಿದೆ ಎಂದರು.

ಆರೋಗ್ಯ ಕ್ಷೇತ್ರದಲ್ಲಿ ವೈದ್ಯರಷ್ಟೇ ಫಾರ್ಮಸಿಸ್ಟ್‌ಗಳ ಪಾತ್ರವೂ ಮಹತ್ವದ್ದಾಗಿದೆ. ರೋಗಿಗಳ ಜೀವದೊಂದಿಗೆ ಸಂಪರ್ಕ ಹೊಂದಿರುವ ಈ ವೃತ್ತಿಯಲ್ಲಿ ಸಣ್ಣ ತಪ್ಪಿಗೂ ಆಸ್ಪದ ನೀಡಬಾರದು. ಒಬ್ಬರು ಮಾಡುವ ತಪ್ಪು ಇಡೀ ಸಮುದಾಯದ ಮೇಲೆ ಕೆಟ್ಟ ಅಭಿಪ್ರಾಯ ಮೂಡಿಸಬಹುದು. ಆದ್ದರಿಂದ ಕಾನೂನಿನ ಚೌಕಟ್ಟಿನಲ್ಲಿ ಶಿಸ್ತಿನಿಂದ




ಕಾರ್ಯನಿರ್ವಹಿಸಬೇಕು. ಕಾನೂನುಬದ್ಧವಾಗಿ ಕರ್ತವ್ಯ ನಿರ್ವಹಿಸುವ ಫಾರ್ಮಸಿಸ್ಟ್‌ಗಳ ಬೆಂಬಲಕ್ಕೆ ಜಿಲ್ಲಾಡಳಿತ ಸದಾ ಇರುತ್ತದೆ ಎಂದು ಅವರು ಹೇಳಿದರು.

ಕೊಪ್ಪಳ ನಗರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಸುರೇಶ ಅವರು ಮಾತನಾಡಿ, ವೈದ್ಯರನ್ನು ದೇವರೆಂದು ಭಾವಿಸಿದರೆ, ಫಾರ್ಮಸಿಸ್ಟ್‌ಗಳು ಪ್ರಸಾದ ವಿತರಕರಿದ್ದಂತೆ. ವೈದ್ಯರು ನೀಡುವ ಶಿಫಾರಸು ಚೀಟಿಯ (ಪ್ರಿಸ್ಕ್ರಿಪ್ಷನ್) ಆಧಾರದ ಮೇಲೆಯೇ ಔಷಧ ವಿತರಣೆ ಮಾಡಬೇಕು. ಇತ್ತೀಚಿನ ದಿನಗಳಲ್ಲಿ ಯುವಕರು ಮತ್ತು ವಿದ್ಯಾರ್ಥಿಗಳು ಮಾದಕ ದ್ರವ್ಯಗಳಿಗೆ ದಾಸರಾಗಿ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಯಾವುದೇ ವಿದ್ಯಾರ್ಥಿಗಳು ಅಥವಾ ಯುವಕರು ಕೆಮ್ಮಿನ ಸಿರಪ್ ಹಾಗೂ ನಿದ್ರೆ ಮಾತ್ರೆಗಳನ್ನು ಪದೇ ಪದೇ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಿದ್ದರೆ, ಅಂತಹ ಸಂಶಯಾಸ್ಪದ ಚಟುವಟಿಕೆಗಳ ಬಗ್ಗೆ ತಕ್ಷಣವೇ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು ಎಂದರು.

ಮಾದಕ ವಸ್ತುಗಳ ಚಟ ಆರಂಭವಾಗುವುದು ಸ್ನೇಹಿತರ ಒತ್ತಾಯದಿಂದ ಒಂದು ಪೆಗ್ ಅಥವಾ ಒಂದು ಸಿಗರೇಟಿನ ಮೂಲಕ; ಆದ್ದರಿಂದ ಆರಂಭದಲ್ಲೇ ಅದನ್ನು ತಡೆಯಲು ಕರ್ನಾಟಕ ಸರ್ಕಾರದ ವತಿಯಿಂದ 'ಬ್ಯಾಡ ಬ್ರೋ' ಎಂಬ ಜಾಗೃತಿ ಅಭಿಯಾನವನ್ನು ರೂಪಿಸಲಾಗಿದೆ. ಸಮಾಜದಲ್ಲಿ ಯಾರಾದರೂ ಇಂತಹ ಚಟಕ್ಕೆ ಒಳಗಾಗುತ್ತಿದ್ದರೆ ಅವರನ್ನು ತಡೆದು ಸನ್ಮಾರ್ಗಕ್ಕೆ ತರಲು ಸಹಕರಿಸಿ, ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕೆಂದು ಹೇಳಿದರು.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತದ ಸಹಾಯಕ ಔಷಧ ನಿಯಂತ್ರಕರಾದ ವೆಂಕಟೇಶ ರಾಠೋಡ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಇಂಟರ್ನ್ಯಾಷನಲ್ ಫಾರ್ಮಾಸ್ಯುಟಿಕಲ್ ಫೆಡರೇಶನ್ ಸಂಸ್ಥೆಯು 1912ರ ಸೆಪ್ಟೆಂಬರ್ 25 ರಂದು ಸ್ಥಾಪನೆಯಾದ ಹಿನ್ನೆಲೆಯಲ್ಲಿ, 2009ರ ಇಸ್ತಾಂಬುಲ್ ಸಮ್ಮೇಳನದ ನಿರ್ಧಾರದಂತೆ ಪ್ರತಿವರ್ಷ ಸೆ. 25ರಂದು ವಿಶ್ವ ಫಾರ್ಮಸಿಸ್ಟ್ ದಿನವನ್ನಾಗಿ ಆಚರಿಸಲಾಗುತ್ತಿದೆ. ಭಾರತದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಫಾರ್ಮಸಿ ಶಿಕ್ಷಣವನ್ನು ಪರಿಚಯಿಸಿದ ಪ್ರೊಫೆಸರ್ ಮಹಾದೇವ್ ಲಾಲ್ ಶ್ರಾಫ್ ಅವರನ್ನು 'ಭಾರತೀಯ ಫಾರ್ಮಸಿಯ ಪಿತಾಮಹ' ಎಂದು ಗೌರವಿಸಲಾಗುತ್ತದೆ. ಈ ವರ್ಷ 'ಆರೋಗ್ಯಕರ ಭವಿಷ್ಯಕ್ಕಾಗಿ ಫಾರ್ಮಸಿಸ್ಟರನ್ನು ಸಬಲೀಕರಿಸುವುದು' ಎಂಬ ಧ್ಯೇಯದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಇಂದು ವಿಶ್ವದ ಒಟ್ಟು ಔಷಧ ತಯಾರಿಕೆಯಲ್ಲಿ ಶೇಕಡ 50 ರಷ್ಟು ಔಷಧಗಳನ್ನು ಭಾರತವೇ ಉತ್ಪಾದಿಸಿ ವಿವಿಧ ದೇಶಗಳಿಗೆ ರಫ್ತು ಮಾಡುತ್ತಿದ್ದು, ಭಾರತ 'ವಿಶ್ವದ ಫಾರ್ಮಾ ಹಬ್' ಆಗಿ ಹೊರಹೊಮ್ಮಿದೆ. ಇದರಲ್ಲಿ ಫಾರ್ಮಸಿಸ್ಟ್‌ಗಳ ಪರಿಶ್ರಮ ಅಪಾರವಾಗಿದ್ದು, ಗುಣಮಟ್ಟದ ಔಷಧ ರೋಗಿಗೆ ತಲುಪುವಲ್ಲಿ ಅವರ ಜವಾಬ್ದಾರಿ ಹಿರಿದು. ಮೆಡಿಕಲ್ ವೃತ್ತಿಯನ್ನು ಕೇವಲ ವ್ಯಾಪಾರವೆಂದು ಪರಿಗಣಿಸದೆ, ಸಾರ್ವಜನಿಕ ಆರೋಗ್ಯ ರಕ್ಷಿಸುವ ದೇವರ ಸೇವೆಯೆಂದು ಕಾರ್ಯನಿರ್ವಹಿಸಬೇಕು. ಕೋವಿಡ್–19 ಮಹಾಮಾರಿಯ ಭೀತಿಯ ಸಂದರ್ಭದಲ್ಲಿ ಆಸ್ಪತ್ರೆಗಳು ಹಾಗೂ ಕ್ಲಿನಿಕ್‌ಗಳು ಮುಚ್ಚಿದ್ದಾಗಲೂ ತಮ್ಮ ಜೀವದ ಹಂಗು ತೊರೆದು 'ಕೋವಿಡ್ ವಾರಿಯರ್ಸ್' ಆಗಿ ಸಾರ್ವಜನಿಕರ ಜೀವ ಉಳಿಸಿದವರು ಫಾರ್ಮಸಿಸ್ಟ್‌ಗಳು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಜನರಲ್ಲಿ 'ಆಂಟಿಬಯೋಟಿಕ್ ರೆಸಿಸ್ಟೆನ್ಸ್' (ಪ್ರತಿಜೀವಕಗಳ ನಿರೋಧಕತೆ) ಸಮಸ್ಯೆ ಹೆಚ್ಚಾಗುತ್ತಿದೆ. ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ ಹಾಗೂ ಫಾರ್ಮಸಿ ಕಾಯ್ದೆಯ ನಿಯಮಾವಳಿಗಳ ಪ್ರಕಾರ, ಅಧಿಕೃತ ವೈದ್ಯರ ಹೆಸರು, ಕೆಎಂಸಿ ಸಂಖ್ಯೆ, ಸಹಿ ಹಾಗೂ ರೋಗಿಯ ವಿವರಗಳನ್ನು ಒಳಗೊಂಡ ಪ್ರಿಸ್ಕ್ರಿಪ್ಷನ್ ಇದ್ದಾಗ ಮಾತ್ರ ಮೆಡಿಕಲ್ ಶಾಪ್‌ಗಳಲ್ಲಿ ಔಷಧ ವಿತರಣೆ ಮಾಡಬೇಕು. ಬಿಳಿ ಹಾಳೆಯಲ್ಲಿ ಬರೆದುಕೊಟ್ಟರೆ ಔಷಧ ನೀಡಬಾರದು ಎಂದು ಹೇಳಿದರು.

ಜಿಲ್ಲಾ ಮಟ್ಟದ ಪ್ರಶಸ್ತಿ ಪ್ರದಾನ: ಕೊಪ್ಪಳ ಜಿಲ್ಲೆಯ ಉತ್ತಮ ಸಾಧನೆ ಮಾಡಿದ ಫಾರ್ಮಸಿಸ್ಟ್‌ಗಳಿಗೆ ಈ ಸಂದರ್ಭದಲ್ಲಿ ಐದು ಜನ ಸಾಧಕರಿಗೆ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಲಾಗಿತು ಹಾಗೂ ಜಿಲ್ಲೆಯ 25ವರ್ಷಕ್ಕಿಂತಲು ಅಧಿಕ ಕಾಲ ಸೇವೆ ಸಲ್ಲಿಸಿದ 125 ಹಿರಿಯ ಫಾರ್ಮಸಿಸ್ಟ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ದರಗದ, ಉಪವಿಭಾಗಾಧಿಕಾರಿಗಳಾದ ಮೆಹಬೂಬ ಜಿಲಾನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಈಶ್ವರ ಸವಡಿ, ರಾಜ್ಯ ಸರ್ಕಾರಿ ಫಾರ್ಮಸಿ ಅಧಿಕಾರಿ ಸಂಘಗಳ ಗೌರವಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಾದ ಸುರೇಶ ಮೊರಗೇರಿ, ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘಗಳ ಅಧ್ಯಕ್ಷರಾದ ಕೊಟ್ರಪ್ಪ ವಿ. ಕೊರ್ಲಳ್ಳಿ, ಗಂಗಾವತಿಯ ಕೊಪ್ಪಳ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘದ ಅಧ್ಯಕ್ಷರಾದ ಅಶೋಕಸ್ವಾಮಿ ಹೇರೂರ, ಡಾ. ಶ್ರವಣ ನರಗುಂದ ಇದ್ದರು.

# ನಾಗರಬೆಟ್ಟದ ಆಕ್ಸ್‌ಫರ್ಡ್ ಪಾಟೀಲ್ಸ್ ಕಾಲೇಜಿನ 225ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಎಂಬಿಬಿಎಸ್ ಸೀಟ್

**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ:**
ದೇಶದ ಪ್ರತಿಷ್ಠಿತ ವೈದ್ಯಕೀಯ ವಿಶ್ವವಿದ್ಯಾನಿಲಯಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರವು ನಡೆಸಿದ ನೀಟ್ ಪರೀಕ್ಷೆಯ ಮರುಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ನಾಗರಬೆಟ್ಟ ಗ್ರಾಮದ ಆಕ್ಸ್‌ಫರ್ಡ್ ಪಾಟೀಲ್ಸ್ ಕಾಲೇಜಿನ ವಿದ್ಯಾರ್ಥಿಗಳು ಅತ್ಯುನ್ನತ ಅಂಕ ಗಳಿಸುವುದರ ಜೊತೆಗೆ ಅಧಿಕ ಸಂಖ್ಯೆಯಲ್ಲಿ ಎಂಬಿಬಿಎಸ್ ಸೀಟ್ ಪಡೆದುಕೊಂಡು ಅದ್ಭುತ ಸಾಧನೆ ಮಾಡಿದ್ದಾರೆ. ಈ ಅಭೂತಪೂರ್ವ ಯಶಸ್ಸಿಗೆ ಸಂಸ್ಥೆಯ ಆಡಳಿತ ಮಂಡಳಿಯು ಹರ್ಷ ವ್ಯಕ್ತಪಡಿಸಿದೆ.

ಪಟ್ಟಣದ ಬಿದರಕುಂದಿ ಸಮೀಪವಿರುವ ಆಕ್ಸ್‌ಫರ್ಡ್ ಪಾಟೀಲ್ಸ್ ಶಿಕ್ಷಣ ಸಂಸ್ಥೆಯ ಉಪಶಾಖೆಯಲ್ಲಿ ಗುರುವಾರದಂದು ಕರೆಯಲಾಗಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಆಡಳಿತ ಅಧಿಕಾರಿ ಅಮೀತಗೌಡ ಪಾಟೀಲ್, "ನಾಗರಬೆಟ್ಟ ಗ್ರಾಮದ ಆಕ್ಸ್‌ಫರ್ಡ್ ಪಾಟೀಲ್ಸ್ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ಪಾರಮ್ಯ ಮೆರೆದಿದ್ದಾರೆ. ಸಂಸ್ಥೆಯ 225 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ಸೀಟ್ ಗಿಟ್ಟಿಸಿಕೊಂಡಿದ್ದಾರೆ," ಎಂದು ಮಾಹಿತಿ ನೀಡಿದರು.

ಸಾಧನೆಯ ಪ್ರಮುಖ

ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 30 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ (ಎಂಬಿಬಿಎಸ್) ಶಿಕ್ಷಣಕ್ಕೆ ಆಯ್ಕೆಯಾಗಿದ್ದಾರೆ. ಅಲ್ಲದೇ ಜೆಇಇಗೂ ವಿದ್ಯಾರ್ಥಿಗಳು ಆಯ್ಕೆಯಾಗಿ ಸಂಸ್ಥೆಗೆ ಹಿರಿಮೆ ತಂದಿದ್ದಾರೆ.



ರಾಜ್ಯದ ಪ್ರತಿಷ್ಠಿತ ಮೈಸೂರು, ಬೆಳಗಾವಿ, ಹುಬ್ಬಳ್ಳಿ, ರಾಯಚೂರು, ಬಳ್ಳಾರಿ, ಮಂಗಳೂರು, ಬೆಂಗಳೂರು, ಕೊಪ್ಪಳ ಸೇರಿದಂತೆ ದೇಶದ ಅತ್ಯುನ್ನತ ವೈದ್ಯಕೀಯ ಕಾಲೇಜುಗಳಲ್ಲಿ ಸಂಸ್ಥೆಯ 225 ಕ್ಕೂ ಅಧಿಕ ವಿದ್ಯಾರ್ಥಿಗಳು ಎಂಬಿಬಿಎಸ್ ಸೀಟ್ ಪಡೆದುಕೊಂಡಿದ್ದಾರೆ. ಎಂಬಿಬಿಎಸ್ ಸೀಟ್ ಪಡೆದ ವಿದ್ಯಾರ್ಥಿಗಳಲ್ಲಿ 160 ಕ್ಕೂ ಹೆಚ್ಚು ವಿದ್ಯಾರ್ಥಿಗಳು ರೈತರ ಮಕ್ಕಳಾಗಿದ್ದಾರೆ.

ಸಂಸ್ಥೆಯಿಂದ ಈವರೆಗೂ ಒಟ್ಟು 1,455 ವಿದ್ಯಾರ್ಥಿಗಳು ವೈದ್ಯಕೀಯ ಸೀಟ್ ಪಡೆದಿದ್ದಾರೆ.

ಬರುವ ವರ್ಷದಲ್ಲಿ 250 ಕ್ಕೂ ಅಧಿಕ ವೈದ್ಯಕೀಯ ಸ್ಥಾನಗಳನ್ನು ಹೊಂದುವ ಪಣವನ್ನು ಸಂಸ್ಥೆ ತೊಟ್ಟಿದೆ.

ಪ್ರತಿವರ್ಷ ಎಂಬಿಬಿಎಸ್ ಗೆ ಆಯ್ಕೆಯಾದ 30 ರಿಂದ 40 ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಆಧಾರದಲ್ಲಿ ಸಹಾಯಧನ ನೀಡಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಪಾಲಕರು ಕಾಲೇಜು ಆಯ್ಕೆ ಮಾಡುವಾಗ ಕೇವಲ ಫಲಿತಾಂಶ ನೋಡದೇ, ನೀಟ್ ಹಾಗೂ ಜೆಇಇ ಅಂತಹ ಅತ್ಯುನ್ನತ ಪರೀಕ್ಷೆಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಗೆ ಸೇರಿಸಬೇಕು. ಆಕ್ಸ್‌ಫರ್ಡ್ ಪಾಟೀಲ್ಸ್ ಸಂಸ್ಥೆಯು ಉತ್ತಮ ಶಿಕ್ಷಣ ನೀಡುತ್ತಾ ಬಂದಿದ್ದು, ಮುಂದೆಯೂ ನೀಡಲಿದೆ ಎಂದು ಅಮೀತಗೌಡ ಪಾಲಕರಿಗೆ ಭರವಸೆ ನೀಡಿದರು. ವಿದ್ಯಾರ್ಥಿಗಳು, ಶಿಕ್ಷಕರು, ಕಾಲೇಜು ಮತ್ತು ಪಾಲಕರು ಈ ನಾಲ್ಕೂ ಭಾಗಗಳು ಸರಿಯಾಗಿ ತಮ್ಮ ಪಾತ್ರ ನಿರ್ವಹಿಸಿದ್ದರಿಂದಲೇ ಈ ಯಶಸ್ಸು ಸಾಧ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದ ಶಿಕ್ಷಕ ಆರ್.ಎಸ್ ಮುರಾಳ ಮಾತನಾಡಿ, "ಹಳ್ಳಿಗಾಡಿನ ಕಾಲೇಜಿನಲ್ಲಿಯೇ 225 ಕ್ಕೂ ಅಧಿಕ ವೈದ್ಯಕೀಯ (ನೀಟ್) ಸೀಟ್ ಆಯ್ಕೆಯಾಗುವುದು ಸಾಮಾನ್ಯ ವಿಷಯವಲ್ಲ. ಜಿಲ್ಲಾ ಮಟ್ಟದ ಕಾಲೇಜುಗಳಲ್ಲಿಯೂ ಇಷ್ಟೊಂದು ವಿದ್ಯಾರ್ಥಿಗಳು ವೈದ್ಯಕೀಯ ಸ್ಥಾನ ಪಡೆದುಕೊಂಡಿಲ್ಲ. ಪ್ರತಿವರ್ಷ ನಮ್ಮ ಸಂಸ್ಥೆಯಿಂದ ಪ್ರತಿಶತ ಆಧಾರದ ಮೇಲೆ 50 ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ರೂಪದಲ್ಲಿ ಸಹಾಯಧನ ನೀಡಲಾಗುತ್ತಿದೆ," ಎಂದರು. ಮುಂದುವರಿದು, ತಮ್ಮ ಕುಟುಂಬಗಳನ್ನು ತೊರೆದು ಹಗಲಿರುಳೆನ್ನದೆ ಶ್ರಮಿಸುವ ಸಂಸ್ಥೆಯ ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಸಮಯ ಹಾಳುಮಾಡದೆ ನಿರಂತರವಾಗಿ ಶಿಕ್ಷಣದಲ್ಲಿ ತೊಡಗಿಸಿಕೊಳ್ಳುವಂತೆ ನೋಡಿಕೊಳ್ಳುವ ಆಡಳಿತ ಮಂಡಳಿಯ ಪಾತ್ರ ಈ ಯಶಸ್ಸಿನಲ್ಲಿ ಬಹುಮುಖ್ಯವಾಗಿದೆ ಎಂದು ತಿಳಿಸಿದರು.

ಈ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸಿಬ್ಬಂದಿಗಳಾದ ಸಿ.ಎಸ್ ದೇಸಾಯಿ ಹಾಗೂ ವಿನಯ್ ಪಾಟೀಲ ಉಪಸ್ಥಿತರಿದ್ದರು.

ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ
SATY MITHI
Kannada Daily Morning



**ಮುಗಳಖೋಡ ಪಟ್ಟಣದ ಹರನಕೋಡಿ ತೋಟದ ಸರಕಾರಿ ಹಿರಿಯ ಪ್ರಾಥಮಿಕ (ಆರ್ ಎಮ್ ಎಸ್ ಎ) ಶಾಲೆಯಲ್ಲಿ ಶಾಲಾ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಶಿಕ್ಷಣ ಪ್ರೇಮಿ ಡಾ। ಮಲ್ಲಿಕಾರ್ಜುನ ಪರಪ್ಪ ಸಲಬನ್ನವರ ಅವರು ಹೋಳಿಗೆ ಊಟ, ಹಪ್ಪಳ, ಹಾಲು, ತುಪ್ಪ ಮತ್ತು ಅನ್ನ ಸಾಂಬಾರು ಇತ್ಯಾದಿ ವಿಶೇಷ ಭೋಜನ ಮಾಡಿಸಿದ್ದಾರೆ. ಎಸ್ ಡಿ ಎಮ್ ಸಿ ಅಧ್ಯಕ್ಷೆ ಮಂಗಲ ಪಣದಿ, ಎಸ್ ಡಿ ಎಮ್ ಸಿ ಸದಸ್ಯರು, ಶಾಲಾ ಶಿಕ್ಷಕರು ಹಾಗೂ ಅಡುಗೆ ಸಿಬ್ಬಂದಿಯವರು ಉಪಸ್ಥಿತಿತರಿದ್ದರು.**

# ಆಯುರ್ವೇದವು ಆರೋಗ್ಯಕರ ಜೀವನದ ಮೂಲ: ಅಜಿತಕುಮಾರ ಬಾಗಮಾರ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:** ನಗರದ ಭಗವಾನ್ ಮಹಾವೀರ ಜೈನ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಬುಧವಾರ 11ನೇ ಆಯುರ್ವೇದ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ಅಜಿತಕುಮಾರ ಬಾಗಮಾರ ಮಾತನಾಡಿ, "ಆಯುರ್ವೇದವು ಭಾರತದ ಪುರಾತನ ಹಾಗೂ ಶ್ರೇಷ್ಠ ವೈದ್ಯ ಪದ್ಧತಿಗಳಲ್ಲಿ ಒಂದಾಗಿದೆ. ರೋಗ ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ, ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಆಯುರ್ವೇದದ ಪ್ರಮುಖ ಆಶಯವಾಗಿದೆ. ನೈಸರ್ಗಿಕ ಆಹಾರ ಪದ್ಧತಿ, ಉತ್ತಮ ಜೀವನಶೈಲಿ ಹಾಗೂ ನಿಯಮಿತ ದಿನಚರಿಯನ್ನು ಅಳವಡಿಸಿಕೊಳ್ಳುವ ಮೂಲಕ ಆರೋಗ್ಯಕರ ಜೀವನ ನಡೆಸಬಹುದು" ಎಂದು ಹೇಳಿದರು.

ಬಳಿಕ ಸಂಸ್ಥೆಯ ನಿರ್ದೇಶಕ ವರ್ಧಮಾನ ಬಾಗಮಾರ ಮಾತನಾಡಿ, "ಇಂದಿನ ಆಧುನಿಕ ಜೀವನಶೈಲಿಯಿಂದಾಗಿ ಜನರಲ್ಲಿ ವಿವಿಧ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಇಂತಹ ಸಂದರ್ಭದಲ್ಲಿ



ಆಯುರ್ವೇದದ ಮಹತ್ವ ಮತ್ತಷ್ಟು ಹೆಚ್ಚಾಗಿದೆ. ಆಯುರ್ವೇದದ ಚಿಕಿತ್ಸಾ ಪದ್ಧತಿ ಹಾಗೂ ಔಷಧೀಯ ಸಸ್ಯಗಳ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸುವ ಮೂಲಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಬೇಕು. ವಿದ್ಯಾರ್ಥಿಗಳು ಆಯುರ್ವೇದದ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿ ಸಮಾಜಕ್ಕೆ ಉತ್ತಮ ಆರೋಗ್ಯ ಸೇವೆ ನೀಡುವ ವೈದ್ಯರಾಗಬೇಕು" ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ಎಚ್. ಕುಲಕರ್ಣಿ, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸೆ. 30ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:** ಧಾರವಾಡದ ಡಾ. ಎಂ. ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ ಹಾಗೂ ಸ್ಥಳೀಯ ಶ್ರೀ ಬೆನಕಪ್ಪ ಶಂಕ್ರಪ್ಪ ಸಿಂಹಾಸನದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರ ಸಾಹಿತ್ಯದ ರೂಪಗಳಾದ ನಾಟಕ ಮತ್ತು ಕಾವ್ಯಗಳ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವು ಸೆಪ್ಟೆಂಬರ್ 30ರಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಸಭಾಭವನದಲ್ಲಿ ಜರುಗಲಿದೆ ಎಂದು ಕಾಲೇಜಿನ ಪ್ರಾಚಾರ್ಯರಾದ ಶ್ರೀ ಬಸವಂತಪ್ಪ ಕೆ. ಹೊಸಹಳ್ಳಿ ತಿಳಿಸಿದ್ದಾರೆ.

ಪಟ್ಟಣದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಡಾ. ಎಂ. ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ವೀರಣ್ಣ ರಾಜೂರ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಸವಂತಪ್ಪ ಕೆ. ಹೊಸಳ್ಳಿ ವಹಿಸಲಿದ್ದಾರೆ ಎಂದರು.

ಖರೇ ಖರೇ ಸಂಗ್ಯಾ ಬಾಳ್ಯ ನಾಟಕ: ಡಾ. ರಾಮಕೃಷ್ಣ ಮರಾಠೆ (ಬೆಳಗಾವಿ) ಹಾಲುಮತ ಕಾವ್ಯಗಳು (ಸಂಪಾದಿತ): ಡಾ. ಎಫ್. ಟಿ. ಹಳ್ಳಿಕೇರಿ (ಹಿರಿಯ ಪ್ರಾಧ್ಯಾಪಕರು, ಹಂಪಿ ವಿಶ್ವವಿದ್ಯಾಲಯ)ನೀರು ನೀರಡಿಸಿತ್ತು ಕವನ ಸಂಕಲನ, ಡಾ. ಎಚ್. ಬಿ. ಕೋಲ್ಕಾರ್ (ಕನ್ನಡ ಪ್ರಾಧ್ಯಾಪಕರು, ಆರ್.ಪಿ.ಡಿ. ಪದವಿ ಕಾಲೇಜು, ಬೆಳಗಾವಿ) ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಪ್ರಾಚಾರ್ಯರು ತಿಳಿಸಿದ್ದಾರೆ.

# ಜಿಲ್ಲಾ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ಪ್ರಥಮ : ರಾಜ್ಯ ಮಟ್ಟಕ್ಕೆ ಆಯ್ಕೆ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:** ಗದಗ ನಗರದಲ್ಲಿ ಜರುಗಿದ ಪದವಿಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ಇಲ್ಲಿನ ಜಗದ್ಗುರು ತೋಂಟದಾರ್ಯ ವಿಜ್ಞಾನ ಹಾಗೂ ವಾಣಿಜ್ಯ ಪಿ.ಯು ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿಯರಾದ ಕು. ಶ್ರೇಯಾ ಹಡಪದ ಮತ್ತು ಕು. ಅನುರಾಧಾ ನಿಡಶೇಸಿ ಪ್ರಥಮ ಸ್ಥಾನ ಪಡೆದು, ರಾಜ್ಯ ಮಟ್ಟದ ಚೆಸ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿನಿಯರ ಚಾಣಾಕ್ಷತೆ ಹಾಗೂ ಏಕಾಗ್ರತೆ-ಗೆ ಈ ಪ್ರಶಸ್ತಿ ಲಭಿಸಿದೆ. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಕಾರ್ಯದರ್ಶಿ ಪ್ರೊ. ಶಿವಾನಂದ ಪಟ್ಟಣಶೆಟ್ಟರ, ಪ್ರಾಚಾರ್ಯ ಸಂಗಮೇಶ ಬಾಗೂರ ಹಾಗೂ ಸಿಬ್ಬಂದಿ ವರ್ಗದವರು ಇಬ್ಬರು ವಿದ್ಯಾರ್ಥಿನಿಯರನ್ನು ಅಭಿನಂದಿಸಿದ್ದಾರೆ. ಅಲ್ಲದೆ, ಮುಂಬರುವ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿಯೂ ಉತ್ತಮ ಸಾಧನೆ ಮಾಡಿ ಜಿಲ್ಲೆಗೆ ಕೀರ್ತಿ ತರಲಿ ಎಂದು ಶುಭ ಹಾರೈಸಿದ್ದಾರೆ.





# ಧಾರ್ಮಿಕ ಆಚರಣೆಯೊಂದಿಗೆ ಮಹಿಳಾ ಸ್ವಾವಲಂಬನೆ, ಸಂಸ್ಕೃತಿ-ಸಂಸ್ಕಾರಕ್ಕೆ ಒತ್ತು

**ಸತ್ಯಮಿಥ್ಯ ಸುದ್ದಿಮೂಲ ಗದಗ:** ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವು ಸೆ.23 ರಂದು ಗದಗದ ಶ್ರೀ ವೀರನಾರಾಯಣನ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು. ಕಾರ್ಯಕ್ರಮದಲ್ಲಿ ಸುಮಾರು 800 ಕ್ಕೂ ಅಧಿಕ ಮಂದಿ ಭಾಗವಹಿಸಿ ಧಾರ್ಮಿಕ ಹಾಗೂ ಸಾಮಾಜಿಕ ಸಂದೇಶಕ್ಕೆ ಸಾಕ್ಷಿಯಾದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕರು ಯೋಜನೆಯ ವಿವಿಧ ಕಾರ್ಯಕ್ರಮಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಶಂಕರಾನಂದ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ, ಯೋಜನೆಯ ವಿವಿಧ ಕಾರ್ಯಕ್ರಮಗಳ ಕುರಿತು ಮಾತನಾಡುವುದರ ಜೊತೆಗೆ ಮಹಿಳೆಯರಿಗೆ ಆಶೀರ್ವಚನ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಕೃಷ್ಣಗೌಡ ಎಚ್. ಪಾಟೀಲ್ ಅವರು, ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಹಿಳೆಯರಲ್ಲಿ ಸ್ವಾವಲಂಬನೆ ಹಾಗೂ ಆರ್ಥಿಕ ಶಿಸ್ತು ಬೆಳೆಸುವ ಕಾರ್ಯ ನಡೆಯುತ್ತಿರುವುದು ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗೌರವಾಧ್ಯಕ್ಷರಾದ ಶ್ರೀ ಮೋಹನ್ ಮಾಳೆಶೆಟ್ಟಿ ಅವರು, ಯೋಜನೆಯ ಕಾರ್ಯಕ್ರಮಗಳು ಕೇವಲ ಆರ್ಥಿಕ ಅಭಿವೃದ್ಧಿಗೆ ಸೀಮಿತವಾಗದೆ, ಸಮಾಜದಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಬೆಳೆಸುವ ಕಾರ್ಯಕ್ಕೂ ಒತ್ತು ನೀಡುತ್ತಿವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ವಿಜಯಕುಮಾರ್ ಗಡ್ಡಿ ಅವರು ಕಾರ್ಯಕ್ರಮದ ಉದ್ದೇಶ ಹಾಗೂ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ನಿರ್ಮಲ ಕೊಳ್ಳಿ ಅವರು ತಾವು ಸಂಘದ ಸದಸ್ಯೆಯಾಗಿದ್ದು, ಸಂಘದ ಮೂಲಕ ಸಾಲ ಪಡೆದು ಸದುಪಯೋಗಪಡಿಸಿಕೊಂಡಿರುವ ಕುರಿತು ತಮ್ಮ ಅನುಭವ ಹಂಚಿಕೊಂಡು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಯೋಜನಾಧಿಕಾರಿ ಉಮಾ ಮೇಲ್ವಿಚಾರಕರು ಶಿಲ್ಪಾ, ಪರ್ವೀನ್ ಬಾನು, ಅಬ್ದುಲ್ ಮುನಾಫ್, ಮುಲ್ಲಾ ಮಾಲತೇಶ ನಲವಡಿ, ಯೂಸುಫ್ ಕೊಟ್ಟೂರು, ಪರಮೇಶ್ವರಪ್ಪ ಜಂತ್ಲಿ, ಸ್ವಾತಿ ಅಕ್ಕಿ, ಕಮಲಾಕ್ಷಿ ಗೊಂದಿ, ನಾಗರಾಜ ಕ್ಷತ್ರಿ, ಸೇರಿದಂತೆ ಗಣ್ಯರು, ಮಾನ್ಯ ಯೋಜನಾಧಿಕಾರಿಗಳು ಉಪಸ್ಥಿತರಿದ್ದರು.

ಒಕ್ಕೂಟದ ಪದಾಧಿಕಾರಿಗಳು, ಸಂಘದ ಅಧ್ಯಕ್ಷರು, ಸದಸ್ಯರು, ವಿವಿಧ ಸಂಘಗಳ ಸದಸ್ಯರು, ಗಣ್ಯರು ಹಾಗೂ ಗ್ರಾಮಸ್ಥರು ಸೇರಿದಂತೆ ನೂರಾರು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಧಾರ್ಮಿಕ ಭಾವನೆ, ಸಾಮಾಜಿಕ ಬದ್ಧತೆ ಹಾಗೂ ಮಹಿಳಾ ಸಬಲೀಕರಣದ ಸಂದೇಶದೊಂದಿಗೆ ಕಾರ್ಯಕ್ರಮ ಗಮನ ಸೆಳೆಯಿತು.

# ಆಸ್ತಿ ವಿಚಾರವಾಗಿ ತಾಯಿ ಮತ್ತು ಮಗನ ಬರ್ಬರ ಹತ್ಯೆ

**ಹಾವೇರಿ:** ಆಸ್ತಿ ವಿಚಾರವಾಗಿ ತಾಯಿ ಮತ್ತು ಮಗನನ್ನು ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಹಾನಗಲ್ ತಾಲೂಕಿನ ಕುಸನೂರು ಗ್ರಾಮದಲ್ಲಿ ನಡೆದಿದೆ. ಮೃತರನ್ನು 55 ವರ್ಷದ ಪ್ರೇಮಕ್ಕ ಬಡಿಗೇರ ಹಾಗೂ ಪುತ್ರ 38 ವರ್ಷದ ಅವಿನಾಶ್ ಬಡಿಗೇರ ಎಂದು ಗುರುತಿಸಲಾಗಿದೆ. ಆಡೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೇಮಕ್ಕ ಬಡಿಗೇರ ಕೆಲವು ವರ್ಷಗಳ ಹಿಂದೆ ಆಸ್ತಿಯನ್ನು ಖರೀದಿ ಮಾಡಿದ್ದರು. ಆದರೆ ಆಸ್ತಿಯನ್ನು ಪ್ರೇಮಕ್ಕ ಹೆಸರಿಗೆ ವರ್ಗಾವಣೆ ಮಾಡಿರಲಿಲ್ಲ. ಈ ಸಂಬಂಧ ಕಾನೂನು ಹೋರಾಟ ನಡೆಸಿ ಕೋರ್ಟ್ ಮೂಲಕ ಆಸ್ತಿಯನ್ನು ಮರಳಿ ತಮ್ಮ ವಶಕ್ಕೆ ಪಡೆದುಕೊಂಡಿದ್ದರು. ಇದರಿಂದ ರೊಚ್ಚಿಗೆದ್ದ ತಿರಕಯ್ಯ ಹೊಸಮಠ ಹಾಗೂ ಬಸವರಾಜ ಹೊಸಮಠ ಎಂಬುವವರು ಕೊಲೆ ಮಾಡಿದ್ದಾರೆ. ಘಟನೆ ನಡೆದ ಸ್ಥಳಕ್ಕೆ ಆಡೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.

# ಹಬ್ಬದ ಸಡಗರದಲ್ಲಿ ಮರೆಯಾಗುವ ಖಾಕಿಯ ಮೌನದ ಕಣ್ಣೀರು

**ದೀಪಗಳ ಬೆಳಕಿನ ಆಚೆಗಿನ ಕತ್ತಲು**

ಬೀದಿ ಬೀದಿಗಳಲ್ಲಿ ಬಣ್ಣಬಣ್ಣದ ವಿದ್ಯುತ್ ದೀಪಗಳ ಸಾಲುಗಳು ಕಣ್ಣಿಗೆ ರಂಗು ತುಂಬುತ್ತಿದ್ದರೆ, ಕಿವಿಯರೆಚುವ ಡಿಜೆ ಸದ್ದು, ಸಕ್ಕರೆ ಮಿಠಾಯಿಗಳ ಹಾಗೂ ಬಿಸಿಬಿಸಿ ಹೋಳಿಗೆಯ ಘಮಲು, ಅಂಗಡಿ ಮುಂಗಟ್ಟುಗಳ ಮುಂದೆ ಮುಗಿಬಿದ್ದ ಜನಜಂಗುಳಿ ಮತ್ತು ಊರ ಮಧ್ಯೆ ಗಾಂಭೀರ್ಯದಿಂದ ಕಂಗೊಳಿಸುವ ಬೃಹತ್ ಗಣೇಶನ ಮೂರ್ತಿಗಳು ಇಡೀ ವಾತಾವರಣವನ್ನೇ ಬದಲಿಸಿಬಿಟ್ಟಿರುತ್ತವೆ. ಇಡೀ ಊರೇ ಗಣಪತಿ ಬಪ್ಪಾ ಮೋರಿಯಾ ಎಂಬ ಮಂತ್ರದಂಡಕ್ಕೆ ತಲೆದೂಗಿ, ಪರಮ ಆನಂದೋತ್ಸಾಹದಲ್ಲಿ ಮಿಂದೆದ್ದಿರುತ್ತದೆ. ಪ್ರತಿಯೊಬ್ಬರ ತುಟಿ ಮೇಲೂ ನಗು ಮೂಡಿರುತ್ತದೆ, ಮನೆಮಂದಿಯೆಲ್ಲಾ ಒಂದೆಡೆ ಸೇರಿ ಹಬ್ಬದೂಟ ಸವಿಯುವ ಖುಷಿಯಲ್ಲಿರುತ್ತಾರೆ. ಜಗತ್ತೇ ಇಂತಹದೊಂದು ಸಂಭ್ರಮದ ಅಲೆಯಲ್ಲಿ ತೇಲಾಡುತ್ತಿರುವ ಈ ಸುಂದರ ಕ್ಷಣದಲ್ಲಿ, ನಿಮ್ಮನ್ನು ಒಂದು ಕ್ಷಣ ನಿಲ್ಲಿಸಿ ಆಳವಾಗಿ ಯೋಚಿಸುವಂತೆ ಮಾಡಲು ಬಯಸುತ್ತೇನೆ. ಆ ಸಮೃದ್ಧ ಹಬ್ಬದ ಕೇಂದ್ರಬಿಂದುವಿನಲ್ಲಿ, ಜನಸಂದಣಿಯ ಕಡಲ ನಡುವೆ, ರಸ್ತೆಯ ಮೂಲೆಮೂಲೆಯಲ್ಲಿ, ಧೂಳು, ಮಳೆ, ಸೆಕೆ ಎನ್ನದೆ ಹಗಲು-ರಾತ್ರಿ ಎನ್ನದೆ ಗಂಟೆಗಟ್ಟಲೆ ಕಲ್ಲುಬಂಡೆಯಂತೆ ಕಾವಲು ಕಾಯುವ ಆ ಖಾಕಿ ಬಣ್ಣದ ಮನುಷ್ಯನ ಮುಖವನ್ನು ಎಂದಾದರೂ ತಾಯಿಯಂತೆ ಕರುಣೆಯಿಂದ ಗಮನಿಸಿದ್ದೀರಾ? ಅವರೇ ನಮ್ಮ ರಕ್ಷಕರು, ನಮ್ಮ ಹೆಮ್ಮೆಯ ಪೊಲೀಸ್ ಸಿಬ್ಬಂದಿ. ನಮಗೆ ಹಬ್ಬವೆಂದರೆ ಜೀವಕ್ಕೆ ಬಿಡುವು, ಮುಖಕ್ಕೆ ಮಂದಹಾಸ; ಆದರೆ ಅದೇ ಹಬ್ಬ ಅವರಿಗೆ ಜೀವ ಹಿಂಡುವ ಕರ್ತವ್ಯದ ಮಹಾಪರೀಕ್ಷೆಯಾಗಿ ಪರಿಣಮಿಸುತ್ತದೆ.

ಸಾಮಾನ್ಯವಾಗಿ ನಮಗೆ ಹಬ್ಬ ಬಂತೆಂದರೆ ಸಾಕು, ಆಫೀಸು ಮತ್ತು ಶಾಲೆಗಳಿಂದ ರಜೆ ಸಿಗುತ್ತದೆ. ತವರು ಮನೆಗೆ ಹೋಗುವುದು, ಬಾಲ್ಯದ ಸ್ನೇಹಿತರೊಂದಿಗೆ ಸೇರಿ ಹರಟೆ ಹೊಡೆಯುವುದು ನಮ್ಮ ವಾಡಿಕೆ. ಆದರೆ, ಒಬ್ಬ ಪೊಲೀಸ್ ಕಾನ್ಸ್ಟೇಬಲ್ ಅಥವಾ ಅಧಿಕಾರಿಗೆ ಹಬ್ಬವೆಂದರೆ ರಜೆಯಿಲ್ಲದ, ನಿದ್ರೆಯಿಲ್ಲದ ನರಕಯಾತನೆ ಎಂದೇ ಹೇಳಬಹುದು. ಗಣೇಶ ಹಬ್ಬವಿರಲಿ, ದೀಪಾವಳಿ ಇರಲಿ ಅಥವಾ ರಂಜಾನ್ ಇರಲಿ, ಜನತೆ ಎಷ್ಟು ಸಂಭ್ರಮದಿಂದ ಹಬ್ಬ ಆಚರಿಸುತ್ತಾರೋ, ಅಷ್ಟು ಹತ್ತು ಪಟ್ಟು ಹೆಚ್ಚು ಆತಂಕ ಮತ್ತು ಎಚ್ಚರಿಕೆಯಿಂದ ಪೊಲೀಸರು ಕಾವಲು ಕಾಯಬೇಕಾಗುತ್ತದೆ. ನೂರಾರು ಜನರಿಗೆ ಹಬ್ಬದ ಖುಷಿ ಹಂಚುವ ಆ ಮನುಷ್ಯ, ತನ್ನ ಸ್ವಂತ ಹೆಂಡತಿ-ಮಕ್ಕಳೊಂದಿಗೆ ಕೂತು ಒಂದು ತುತ್ತು ಹಬ್ಬದ ಅಡುಗೆ ತಿನ್ನುವ ಭಾಗ್ಯದಿಂದ ವಂಚಿತನಾಗಿರುತ್ತಾನೆ. ಮಗು ಹೊಸ ಉಡುಪು ತೊಟ್ಟು, ಅಪ್ಪಾ ಯಾವಾಗ ಮನೆಗೆ ಬರ್ತೀರಾ ಎಂದು ಫೋನ್ ಮಾಡಿ ಹಠ ಮಾಡಿದಾಗ, ಕರ್ತವ್ಯದ ಜಾಗದಲ್ಲೇ ನಿಂತು ಗಂಟಲು ಬಿಗಿದುಕೊಂಡರೂ, ಬರ್ತೀನಿ ಕಣಮ್ಮ ಹಬ್ಬ ಮುಗಿಸಿ ಬರ್ತೀನಿ ಎಂದು ಸುಳ್ಳು ಹೇಳಿ ಫೋನ್ ಕಟ್ ಮಾಡುವ ಆ ತಂದೆಯ ಅಂತರಾಳದ ರೋಧನೆ ಯಾರಿಗಾದರೂ ಕೇಳಿಸೀತೇ?





ಗಣೇಶ ವಿಸರ್ಜನೆ ಅಥವಾ ಮೆರವಣಿಗೆಯ ದಿನಗಳಂತೂ ಅವರಿಗೆ ಅಗ್ನಿಪರೀಕ್ಷೆಯೇ ಸರಿ. ಬೆಳಗಿನ ಜಾವದಿಂದ ಆರಂಭವಾಗಿ ರಾತ್ರಿ ಕಳೆದು ಮುಂಜಾನೆ ತನಕ ಹದಿನೈದರಿಂದ ಹದಿನೆಂಟು ಗಂಟೆಗಳ ಕಾಲ ಕಾಲು ನೋಯುವವರೆಗೆ ನಿಲ್ಲಬೇಕು. ಕುಳಿತುಕೊಳ್ಳಲು ನೆರಳಿಲ್ಲ, ಹೊಟ್ಟೆಗೆ ಸರಿಯಾದ ಸಮಯಕ್ಕೆ ಊಟವಿಲ್ಲ, ಕುಡಿಯಲು ಹನಿ ನೀರಿಲ್ಲ. ಆದರೂ ಮುಖದಲ್ಲಿ ಎಳ್ಳಷ್ಟು ಬೇಸರವಿಲ್ಲದೆ ಕೈಯಲ್ಲಿ ಲಾಠಿ ಹಿಡಿದು ನಿಲ್ಲುವ ಅವರ ಛಲಕ್ಕೆ ಸಾಟಿ ಯಾರೂ ಇಲ್ಲ.

ಗಣೇಶ ಚತುರ್ಥಿಯ ಕೊನೆಯ ದಿನ, ಅಂದರೆ ವಿಗ್ರಹ ವಿಸರ್ಜನೆಯ ರಾತ್ರಿಯಆರೋಚಕತೆಹಾಗೂಉದ್ವಿಗ್ನತೆಸಾಮಾನ್ಯರಕಲ್ಪನೆಗೂಮೀರಿದ್ದು. ಊರೆಲ್ಲಾ ಡೋಲು-ತಾಳಗಳಿಗೆ ತಕ್ಕಂತೆ ಕುಣಿದು ಕುಪ್ಪಳಿಸುತ್ತಿದ್ದರೆ, ಪೊಲೀಸರು ಪ್ರತಿ ಹೆಜ್ಜೆಯ ಮೇಲೂ ಹದ್ದು ಕಣ್ಣಿಟ್ಟಿರುತ್ತಾರೆ. ಕಿಡಿಗೇಡಿಗಳು ಬಂದು ಸಮಾಜದ ಶಾಂತಿ ಕದಡಬಾರದು, ಸಣ್ಣ ಕಿಡಿಯೂ ದೊಡ್ಡ ಕೋಮುಗಲಭೆಯಾಗಿ ಮಾರ್ಪಡಬಾರದು ಎಂದು ಅವರು ತಮ್ಮ ಉಸಿರನ್ನೇ ಬಿಗಿಹಿಡಿದು ಕಾವಲು ಕಾಯುತ್ತಾರೆ. ಆ ಮಹಾಮೇಳದ ದಟ್ಟ ಧೂಳು, ಕಿವಿಕರಗಿಸುವ ಶಬ್ದ ಮಾಲಿನ್ಯ, ನೂಕುನುಗ್ಗಲು-ಇವುಗಳ ಮಧ್ಯೆ ನಿಂತು ಕರ್ತವ್ಯ ನಿರ್ವಹಿಸುವುದು ಸುಲಭದ ಮಾತಲ್ಲ. ಮದ್ಯಪಾನ ಮಾಡಿ ಮೈಮರೆತವರನ್ನು ಹದ್ದುಬಸ್ತಿನಲ್ಲಿಡುವುದು, ಟ್ರಾಫಿಕ್ ಜಾಮ್ನಲ್ಲಿ ಸಿಲುಕಿದ ಆಂಬುಲೆನ್ಸ್‌ಗೆ ದಾರಿ ಮಾಡಿಕೊಡುವುದು ನಿಜಕ್ಕೂ ಸಾಹಸವೇ ಸರಿ. ಸೂರ್ಯ ಮೂಡುವವರೆಗೂ ರಸ್ತೆಯಲ್ಲೇ ನಿಂತು ಇಡೀ ಊರಿಗೆ ಸುರಕ್ಷತೆಯ ಕವಚವಾಗುವ ಇವರ ಶ್ರಮಕ್ಕೆ ಬೆಲೆ ಕಟ್ಟಲು ಸಾಧ್ಯವೇ? ನಾವು ಪೊಲೀಸರನ್ನು ನೋಡಿದಾಗ ಕೇವಲ ಅವರ ಮೇಲಿರುವ ಖಾಕಿ ಬಟ್ಟೆ, ಶೂಗಳು ಮತ್ತು ಗತ್ತಿನ ದಂಡನೆ ಮಾತ್ರ ನಮ್ಮ ಕಣ್ಣಿಗೆ ರಾಚುತ್ತದೆ. ಆದರೆ ಆ ಖಾಕಿ ಬಟ್ಟೆಯೊಳಗೆ ಬಡತನ, ನೋವು, ಕಣ್ಣೀರು ಮತ್ತು ಜವಾಬ್ದಾರಿಗಳಿಂದ ಕೂಡಿದ ಒಬ್ಬ ಹಸಿ ಹಸಿ ಮನುಷ್ಯ ಇರುತ್ತಾನೆ. ಆತನ ಮನೆಯಲ್ಲೂ ವೃದ್ಧ ತಂದೆ-ತಾಯಿಯರ ಅನಾರೋಗ್ಯವಿರುತ್ತದೆ, ಶಾಲೆಗೆ ಹೋಗುವ ಮಕ್ಕಳ ಫೀಸ್ ಕಟ್ಟುವ ಚಿಂತೆಯಿರುತ್ತದೆ. ತಮ್ಮ ಸ್ವಂತ ಮನೆಯಲ್ಲಿ ಯಾವುದಾದರೂ ತುರ್ತು ಪರಿಸ್ಥಿತಿ ಬಂದಿದ್ದರೂ, ಕರ್ತವ್ಯದ ಕರೆ ಬಂದ ತಕ್ಷಣ ಎಲ್ಲವನ್ನೂ ಕಣ್ಣೀರಿನ ಜೊತೆ ನುಂಗಿ ಬಂದು ಜನರ ರಕ್ಷಣೆಗೆ ನಿಲ್ಲುವ ಅವರ ತ್ಯಾಗ ಮನೋಭಾವ ಅನನ್ಯ. ಹಬ್ಬದ ರಾತ್ರಿ ಹೆಂಡತಿ ಮಾಡಿದ ಬಿಸಿಯಾದ ಹೋಳಿಗೆಯನ್ನು ನೆನೆಯುತ್ತಾ, ರಸ್ತೆಯಲ್ಲಿ ಪೆಟ್ರೋಲಿಂಗ್ ಮಾಡುವ ಜೀಪಿನ ಸದ್ದು ಕೇಳುತ್ತಾ ಸಮಯ ಕಳೆಯುವ ಅವರ ಒಂಟಿತನ ಅದೆಷ್ಟು ನೋವಿನಿಂದ ಕೂಡಿರುತ್ತದೆ ಒಮ್ಮೆ ಊಹಿಸಿ!

ಪೊಲೀಸರು ಕೇವಲ ಕಾನೂನು ಪಾಲಕರು ಮಾತ್ರವಲ್ಲ, ಅನೇಕ ಸಂದರ್ಭಗಳಲ್ಲಿ ಅವರೇ ಅಪ್ಪಟ ಮಾನವೀಯತೆಯ ಪ್ರತೀಕ. ಹಬ್ಬದ ನೂಕುನುಗ್ಗಲಿನಲ್ಲಿ ದಾರಿತಪ್ಪಿ ಅಳುತ್ತಿದ್ದ ಕಂದಮ್ಮನನ್ನು ಪಾಲಕರಿಗೆ ಸೇರಿಸುವುದರಿಂದ ಹಿಡಿದು, ವೃದ್ಧರಿಗೆ ಜೀವದ ಹಂಗು ತೊರೆದು ರಸ್ತೆ ದಾಟಿಸಲುಸಹಾಯಮಾಡುವವರೆಗೆಅವರುಎಷ್ಟೋಸತ್ಕಾರ್ಯಗಳನ್ನು ಮಾಡುತ್ತಿರುತ್ತಾರೆ. ಆದರೆ ವಿಪರ್ಯಾಸವೆಂದರೆ, ಇವರ ಈ ಒಳ್ಳೆಯ ಕೆಲಸಗಳು ಯಾವತ್ತೂ ಮುಖಪುಟದಲ್ಲಿ ಸುದ್ದಿಯಾಗುವುದಿಲ್ಲ. ಬದಲಿಗೆ ಎಲ್ಲಾದರೂ ಒಂದು ಸಣ್ಣ ಲೋಪವಾದರೆ, ಅಥವಾ ಕಾನೂನು ಸುವ್ಯವಸ್ಥೆ ಕಾಪಾಡಲುಲಘುವಾಗಿಲಾಠಿಬೀಸಬೇಕಾದಪ್ರಸಂಗಬಂದರೆಸಾಕು,ಇಡೀ ಪೊಲೀಸ್ ವ್ಯವಸ್ಥೆಯನ್ನು ಜಾಲತಾಣಗಳಲ್ಲಿ ಹಿಗ್ಗಾಮುಗ್ಗಾ ಟೀಕಿಸಲು ಜನ ಮುನ್ನುಗ್ಗುತ್ತಾರೆ. ಈ ಅನ್ಯಾಯದ ನಿಂದನೆಗಳ ನಡುವೆಯೂ ಕಿಂಚಿತ್ತೂ ಕರ್ತವ್ಯ ಚ್ಯುತಿ ತೋರದೆ ಮತ್ತೆ ಮತ್ತೆ ನಮ್ಮ ಸೇವೆಗೆ ನಿಲ್ಲುವ ಅವರ ವೃತ್ತಿಧರ್ಮ ನಿಜಕ್ಕೂ ವಿಸ್ಮಯಕಾರಿಯಾದದ್ದು. ಹಬ್ಬಗಳು ಬಂದು ಹೋಗುತ್ತವೆ, ಆದರೆ ಪೊಲೀಸರ ಕಾವಲು ಎಂದೆಂದಿಗೂ ನಿರಂತರ. ನಾವುಒಂದುದಿನಹಬ್ಬಆಚರಿಸಿ ಮರೆತುಬಿಡಬಹುದು, ಆದ-ರೆ ಅವರು ಇಡೀ ವರ್ಷ, ಹಗಲು-ರಾತ್ರಿ ಎನ್ನದೆ ತಮ್ಮ ನೆಮ್ಮದಿಯನ್ನು, ಹಬ್ಬದ ಸಂಭ್ರಮವನ್ನು ಜನಸಾಮಾನ್ಯರಿಗಾಗಿ ಬಲಿ ಕೊಡುತ್ತಾರೆ. ಮುಂದಿನ ಬಾರಿ ನೀವು ಯಾವುದೇ ಹಬ್ಬದ ಸಂದರ್ಭದಲ್ಲಿ ರಸ್ತೆಯ ಮೂಲೆಮೂಲೆಯಲ್ಲಿ ನಿಂತಿರುವ ಪೊಲೀಸರನ್ನು ಕಂಡಾಗ, ದ್ವೇಷದಿಂದಲ್ಲ, ಒಂದು ಕೃತಜ್ಞತಾಪೂರ್ವಕ ಮುಗುಳ್ನಗುವಿನೊಂದಿಗೆ ನೋಡಿ. ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಅವರ ಕೆಲಸಕ್ಕೆ ಅಡ್ಡಿಪಡಿಸದೆ ಸಹಕರಿಸಿ. ಅದೇ ನೀವು ಅವರಿಗೆ ನೀಡುವ ಅತ್ಯಮುತ್ತಮ ಉಡುಗೊರೆ. ನಮ್ಮ ಸುರಕ್ಷತೆಯೇ ಅವರ ಹಬ್ಬ, ನಮ್ಮ ಮುಖದ ನಗುವೇ ಅವರ ಅತಿ ದೊಡ್ಡ ಸಂಭ್ರಮ. ಖಾಕಿಯ ಈ ಮೌನ ತ್ಯಾಗಕ್ಕೆ ಪ್ರತಿಯಾಗಿ ನಾವು ಅವರಿಗೆ ನೀಡಬೇಕಾಗಿರುವುದು ಕೇವಲ ಭಯವಲ್ಲ; ಬದಲಿಗೆ ಅಪಾರ ಗೌರವ, ಅಕ್ಕರೆ ಮತ್ತು ಸಹಕಾರ. ಏಕೆಂದರೆ, ಅವರು ನಮಗಾಗಿ ತಮ್ಮ ಹಬ್ಬದ ಬೆಳಕನ್ನು ಕತ್ತಲಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಆ ಮೌನ ಮಹಾಕಾವ್ಯಕ್ಕೆ ನಮ್ಮದೊಂದು ಸಾರ್ಥಕ ನಮನ ಸಲ್ಲಿಸೋಣ.



ಶ್ರೀಧರ ದೊಡಮನಿ,
ಯುವ ಸಾಹಿತಿ,
ಗದಗ ಜಿಲ್ಲೆ

SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114